ಶಿವ ಶರಣರ

# ಅಹಿಂಸಾ ಧರ್ಮ

1956

251/315

182

200/5542

ಶಿವಾನುಭವ ಗ್ರಂಥಮಾಲಾ ನಂ|| ೮೫.

# ಶಿವ ಶರಣರ
# ಅಹಿಂಸಾ ಧರ್ಮ.

ಸಂಪಾದಕರು.

ಡಾ|| ಬ|| ಫ. ಗು. ಹಳಕಟ್ಟಿ,

ಬಿ. ಎ. ಎಲ್. ಎಲ್. ಬಿ.

ವಿಜಾಪುರ

(ಈ ಗ್ರಂಥದ ಸ್ವಾಮಿತ್ವವು ಕಾದಿಡಲ್ಪಟ್ಟಿದೆ)

ಇಸ್ವಿ ೧೯೩೭] [ಬೆಲೆ ೭ ಆಣೆ

ಇದನ್ನು ವಿಜಾಪುರದಲ್ಲಿ
ರಾ॥ ಬ॥ ಫ. ಗು. ಹಳಕಟ್ಟಿ ಇವರು ತಮ್ಮ
**ಹಿತಚಿಂತಕ ಪ್ರಿಂಟಿಂಗ ಪ್ರೆಸ್,** (ವಾರ್ಡ ನಂ॥ ೨. ವಿಜಾಪುರ)
ಇಲ್ಲಿ ಮುದ್ರಿಸಿದರು ಮತ್ತು ಅವರು ಅದನ್ನು ಅಲ್ಲಿಯೇ
ಪ್ರಕಟಿಸಿದರು.

# ಪ್ರಸ್ತಾವನೆ.

ಕನ್ನಡ ಭಾಷೆಯಲ್ಲಿ ಶಿವಶರಣರ ವಾಙ್ಮಯವು ಅತ್ಯಂತ ಮಹತ್ವದ್ದೆಂಬದು ಈಗ ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಇದರಲ್ಲಿ ನಮ್ಮಿಂದ ಈ ವರೆಗೆ ೮೪ ಗ್ರಂಥಗಳು ಪ್ರಸಿದ್ಧವಾಗಿರುತ್ತವೆ. ಇವು ಬಹುಶಃ ಮೂಲ ಗ್ರಂಥಗಳೇ ಇರುತ್ತವೆ. ಅವುಗಳಲ್ಲಿ ಕೆಲವುಗಳನ್ನು ನಾವು ವಿಷಯಾನುಸಾರ ವ್ಯವಸ್ಥೆಗೊಳಿಸಿದ್ದೇವೆ. ಇವುಗಳಲ್ಲಿ ಬಹುತರ ಎಲ್ಲ ಗ್ರಂಥಗಳನ್ನು ನಾವು ಸಂಗ್ರಹ ಗ್ರಂಥಗಳೊಳಗಿಂದ ಆಯ್ದು ಅವುಗಳನ್ನು ಒತ್ತಟ್ಟಿಗೆ ಸೇರಿಸಿ ಪ್ರಕಟಿಸಿರುತ್ತೇವೆ. ಹೀಗೆ ಈ ಗ್ರಂಥಗಳು ವೀರಶೈವ ವಾಙ್ಮಯ ಸಂಶೋಧನದಿಂದ ಉಂಟಾದವು ಇರುತ್ತವೆ. ಅವುಗಳಲ್ಲಿ ೧೦-೧೫ ಗ್ರಂಥಗಳು ಮಾತ್ರ ಪುರಾತನ ಕಾಲದಲ್ಲಿ ಸಂಗ್ರಹವಾದವುಗಳು ಇರುತ್ತವೆ.

ಹೀಗೆ ಮೂಲ ಗ್ರಂಥಗಳನ್ನು ಸಂಶೋಧಿಸುವದೂ ಅವುಗಳನ್ನು ಬೇರೆಯಾಗಿ ಬರೆಯಿಸಿ ಒಂದು ವ್ಯವಸ್ಥೆಗೆ ತಂದು ಅಚ್ಚುಹಾಕುವದೂ ಈ ಕಾರ್ಯಗಳಿಗೆ ವೇಳೆಯೂ ಶ್ರಮವೂ ಹತ್ತುವದು ಸ್ಪಷ್ಟವದೆ. ನಾವು ಈ ವರೆಗೆ ಪ್ರಸಿದ್ಧ ಮಾಡಿದ ಗ್ರಂಥಗಳು ಬಹುತರವಾಗಿ ದೊಡ್ಡವೂ ಹೆಚ್ಚು ಬೆಲೆಯುಳ್ಳವೂ ಇದ್ದು ಅವುಗಳ ಭಾಷೆಯು ಪುರಾತನ ಕಾಲದ್ದು ಇದೆ. ಇಂಥ ಗ್ರಂಥಗಳನ್ನು ಬೆಲೆಕೊಟ್ಟು ಕೊಳ್ಳುವಂಥವರ ಸಂಖ್ಯೆಯು ನಮ್ಮ ನಾಡಿನಲ್ಲಿ ಸ್ವಭಾವಿಕವಾಗಿ ಕಡಿಮೆ ಇರುತ್ತದೆ. ಇದರಿಂದ ಈ ಗ್ರಂಥಗಳ ಪ್ರಕಟನಾ ಕಾರ್ಯವು ಬಹು ನಿಧಾನವಾಗಿ ಸಾಗುತ್ತದೆ.

ಇನ್ನು ಮೇಲೆ ನಾವು ಈ ಪದ್ಧತಿಯನ್ನು ಬಿಟ್ಟು ಬೇರೊಂದು ಪದ್ಧತಿಯನ್ನು ಸ್ವೀಕರಿಸಲು ಯೋಚಿಸಿದ್ದೇವೆ. ನಮ್ಮ ವೀರಶೈವ ವಾಙ್ಮಯದಲ್ಲಿ ಬಹು ಜನರು ವಚನಕಾರರಿದ್ದು ಅವರ ವಚನಗಳನ್ನು ನಾವು ಬೇರೆ ಬೇರೆಯಾಗಿ ಪ್ರಸಿದ್ಧಿಸುವೆವು. ಇಂಥ ಗ್ರಂಥಗಳಲ್ಲಿ ವಚನಕಾರರ ಉಕ್ತಿಗಳ, ಅವರ ಚರಿತ್ರೆ ಮತ್ತು ವಿಚಾರಗಳನ್ನು ವಿವರಿಸುವೆವು. ಇವು ಚಿಕ್ಕ ಗ್ರಂಥಗಳಾಗುವವು. ಆಯಾ ವಚನಕಾರರ ಅಭಿಪ್ರಾಯಗಳನ್ನು ತಿಳಿದುಕೊಳ್ಳಲು ಇವು ಸಹಾಯಕಾರಿಯಾಗುವವು.

ಈಗ ನಾವು ಶಿವಶರಣರ ಅಹಿಂಸಾ ಮಾರ್ಗವನ್ನು ಕುರಿತು ಇರುವ ಉಕ್ತಿಗಳನ್ನು ಒತ್ತಟ್ಟಿಗೆ ಸಂಗ್ರಹಿಸಿದ್ದೇವೆ. ಇದು ಉಪಯುಕ್ತ ಗ್ರಂಥವೆಂಬುದು ವಾಚಕರಿಗೆ ಗೊತ್ತಾಗದೆ ಇರಲಾರದು. ಇದೇ ರೀತಿಯಾಗಿ ನಾವು ಒಟ್ಟು ೧೬೫ ಗ್ರಂಥಗಳನ್ನು ಪ್ರಸಿದ್ಧಿಸಬೇಕೆಂದು ಯೋಚಿಸಿದ್ದೇವೆ. ಅವುಗಳ ಪಟ್ಟಿಯನ್ನು ನಾವು ಶಿವಾನುಭವ ಪತ್ರಿಕೆಯ ಹಿಂದಿನ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ. ಅವು ಯಾರಿಗಾದರೂ ಬೇಕಾಗಿದ್ದಲ್ಲಿ ಅವರು ನಮಗೆ ತಿಳಿಸಿದಲ್ಲಿ ನಾವು ಅವುಗಳ ಪ್ರತಿಗಳನ್ನು ಅವರಿಗೆ ಕಳಿಸಿಕೊಡುವೆವು.

ಈ ಹೊಸ ಕ್ರಮವನ್ನು ಕುರಿತು ನಾವು ನಮ್ಮ ಮಿತ್ರರಾದ ಶ್ರೀಯುತ ಕಲ್ಯಾಣಪ್ಪ ಬ್ಯಾಳಿ ಬಿ. ಎ. ಹೆಡ್‌ಮಾಸ್ತರ ಹಾಯಸ್ಕೂಲ ಹುನಗುಂದ ಇವರಿಗೆ ತಿಳಿಸಲಾಗಿ ಅವರು ಈ ಯೋಜನೆಯು ಉಪಯುಕ್ತವೆಂದು ನಮಗೆ ತಿಳಿಸಿದ್ದಲ್ಲದೆ ಇದನ್ನು ಅವರು ತಮ್ಮ ಗ್ರಾಮದಲ್ಲಿರುವ ಶ್ರೀಮಂತ ದೊಡ್ಡಪ್ಪ ಅಣ್ಣಾ ನಾಗರಾಳ ಈ ಮಹನೀಯರಿಗೆ ತಿಳಿಸಲಾಗಿ ಇವರು ಈ ಕಾರ್ಯದಲ್ಲಿ ನಮಗೆ ಸಹಾಯವಾಗಬೇಕೆಂದು ೧೦೧ ರೂ. ಗಳನ್ನು ನಮಗೆ ಕಳಿಸಿದರು. ಅದಕ್ಕೋಸ್ಕರ ನಾವು ಅವರಿಗೆ ಬಹಳ ಕೃತಜ್ಞರಾಗಿದ್ದೇವೆ. ನಮ್ಮ ಕನ್ನಡ ನಾಡಿನಲ್ಲಿರುವ ಮಹನೀಯರು ಇದೇ ರೀತಿ ಸಹಾಯ ಮಾಡಿದಲ್ಲಿ ಶಿವಶರಣರ ಮಹತ್ವದ ವಾಙ್ಮಯವು ಬೇಗನೆ ಪ್ರಕಾಶಕ್ಕೆ ಬರುವದೆಂದು ನಾವು ಭರವಸೆ ತಾಳಿದ್ದೇವೆ.

ವಿಜಾಪುರ
೨೫-೩-೧೯೫೬

ಫ. ಗು. ಹಳಕಟ್ಟಿ.
ಬಿ. ಎ. ಎಲ್. ಎಲ್. ಬಿ.
ಸಂಪಾದಕ, ಶಿವಾನುಭವ

# ವಿಷಯಾನುಕ್ರಮಣಿಕೆ


೧. ಸಾಮಾನ್ಯ ವಿವೇಚನೆ.... .... .... ೧
೨. ದೇವರದಾಸಿಮಯ್ಯನ ವಿಚಾರಗಳು .... .... ೩
೩. ಬಸವೇಶ್ವರ .... .... .... ೫
೪. ಮರುಳಸಿದ್ಧ .... .... .... ೭
೫. ಮಹಾದೇವಿಯಕ್ಕ .... .... .... ೮
೬. ಸಕಳೇಶ ಮಾದರಸ.... .... .... ೮
೭. ಕಿನ್ನರೀ ಬ್ರಹ್ಮಯ್ಯ.... .... .... ೯
೮. ಶಂಕರದಾಸಿಮಯ್ಯ.... .... .... ೧೧
೯. ಸುಜ್ಞಾನಿದೇವ .... .... ೧೧
೧೦. ಬಡಿಹೋರಿ ಬ್ರಹ್ಮಯ್ಯ .... .... ೧೨
೧೧. ಹಲಾಯುಧ .... .... .... ೧೬
೧೨. ಸಾಮಾನ್ಯ ವಚನಗಳು .... .... ೨೦
೧೩. ದಸರಯ್ಯ .... .... .... ೨೩
೧೪. ಚನ್ನ ಬಸವೇಶ್ವರ .... .... .... ೩೪
೧೫. ಸಿದ್ಧರಾಮೇಶ್ವರ .... .... .... ೩೫

## ಶಿವಶರಣರ

# ಅಹಿಂಸಾ ಧರ್ಮ.

ಭೂತದಯೆ, ಅಹಿಂಸೆ ಇವು ಯಾವ ದೇಶದಲ್ಲಿ ಹೆಚ್ಚಾಗಿ ರೂಢವಾಗಿರುತ್ತವೆಯೋ ಆ ದೇಶವು ನಾಗರಿಕತೆಯುಳ್ಳದ್ದೆಂದು ಹೇಳುವದುಂಟು. ಆದರೆ ಯಾವ ನಾಡಿನಲ್ಲಿ ಹಿಂಸಾಚಾರಗಳೂ ಕ್ರೂರ ಕೃತ್ಯಗಳೂ ಹೆಚ್ಚಾಗಿ ನಡೆಯುತ್ತವೆಯೋ ಆ ನಾಡು ನಾಗರಿಕತೆಯಲ್ಲಿ ಹಿಂದುಳಿದದ್ದೆಂಬುದರಲ್ಲಿ ಸಂದೇಹವಿರಲಾರದು. ಕಾಡ ಮನುಷ್ಯನು ಯಾವಾಗಲೂ ಹಿಂಸಾಚಾರದಲ್ಲಿ ಮಗ್ನನಾಗಿರುತ್ತಾನೆ. ಅವನು ಪ್ರಾಣಿಗಳ ವಧೆಯನ್ನು ಮಾಡುತ್ತಾನೆ. ಮತ್ತು ಅವನಿಗೆ ಮಾಂಸಾಹಾರವೇ ಮುಖ್ಯವಾಗಿರುತ್ತದೆ. ಆದರೆ ಸುಧಾರಿಸಿದ ರಾಷ್ಟ್ರಗಳಲ್ಲಿ ಮನುಷ್ಯನು ಪ್ರಾಣಿಗಳನ್ನು ಸಂಹರಿಸುವದನ್ನು ಬಿಟ್ಟುಕೊಟ್ಟು ಶಾಕಾಹಾರಿಯಾಗಿರುತ್ತಾನೆ. ಇಂಥವನ ಮನಸ್ಸು ಕೋಮಲವಾಗಿರುತ್ತದೆ. ಅವನು ಎಲ್ಲರಲ್ಲಿಯೂ ಮಮತೆಯಿಂದ ವರ್ತಿಸುತ್ತಾನೆ. ಹಿಂದುಸ್ಥಾನದ ಸಾಮಾಜಿಕ ಇತಿಹಾಸದಲ್ಲಿ ಈ ಸಂಗತಿಗಳು ಯಾವಾಗಲೂ ಕಂಡು ಬರುತ್ತವೆ.

ಹಿಂದುಸ್ಥಾನವನ್ನು ಆರ್ಯರು ಬಹು ಪುರಾತನ ಕಾಲದಲ್ಲಿಯೇ ವಸಾಹತು ಮಾಡಿದರು. ಅವರು ಆರಂಭದಲ್ಲಿ ಮಾಂಸಾಹಾರಿಗಳಾಗಿದ್ದರು. ಅವರು ಈ ಕಾಲದಲ್ಲಿ ಅಗ್ನಿ, ಇಂದ್ರ, ಮರುತ್ ಇವು ದೇವತೆಗಳೆಂದು ಭಾವಿಸಿ ಅವುಗಳ ಪೂಜೆ ಮಾಡುತ್ತಿದ್ದರು. ಈ ದೇವತೆಗಳು ಯಜ್ಞಯಾಗಾದಿಗಳಿಂದ ಪ್ರೀತರಾಗುವರೆಂದು ಅವರು ತಿಳಿದು, ಪ್ರಾಣಿಗಳನ್ನು ವಧಿಸಿ, ಅವುಗಳಿಗೆ ಬಲಿ ಕೊಡುವರು. ಪ್ರಾಣಿಗಳನ್ನು ಹೀಗೆ ವಧಿಸಿ, ಅವುಗಳ ಮಾಂಸವನ್ನು ತಾವೂ ಭುಂಜಿಸುವರು. ಗೋವುಗಳನ್ನು ಸಹ ಸಂಹರಿಸಿ, ಅವುಗಳ ಮಾಂಸವನ್ನು ತಿನ್ನುವರು. ಅರಸರಾದವರು ಅಶ್ವಮೇಧ ಯಾಗಗಳನ್ನು ಮಾಡಿ, ಕುದುರೆಗಳನ್ನು ಸಂಹರಿಸಿ, ಅವುಗಳ ಮಾಂಸವನ್ನು ತಿನ್ನುವರು. ಹಾಗೆಯೇ ಅವರು ಎಲ್ಲ ತರದ ಪಶುಪಕ್ಷಿಗಳನ್ನು ಸಹ ಕೊಂದು ತಿನ್ನಲು ಹೇಸುತ್ತಿದ್ದಿಲ್ಲ. ಬ್ರಾಹ್ಮಣ ಮೊದಲ್ಗೊಂಡು ಎಲ್ಲ ವರ್ಣದವರೂ ಹೀಗೆಯೇ ಮಾಂಸವನ್ನು ಭುಂಜಿಸುವವರಾಗಿದ್ದರು. ಆದರೆ ಕ್ರಿಸ್ತ ಶಕದ ಪೂರ್ವ ೬ನೇ ಶತಮಾನದಲ್ಲಿ

ಬೌದ್ಧ, ಜೈನರು ಭಾರತ ದೇಶದಲ್ಲಿ ಉಗಮಿಸಿ, ಮಾಂಸಾಹಾರವು ನಿಷಿದ್ಧವೆಂದು ಸಾರಿದರು. ಅಶೋಕ ಚಕ್ರವರ್ತಿಯು ಬೌದ್ಧ ಧರ್ಮವನ್ನು ಪ್ರಸಾರ ಮಾಡಿ, ಪ್ರಾಣಿಗಳ ವಧೆಯನ್ನು ಮಾಡಬಾರದೆಂಬ ತತ್ವವನ್ನು ಭಾರತದಲ್ಲೆಲ್ಲ ಪ್ರಸಾರ ಮಾಡಿದನು. ಅವನ ಅನೇಕ ಶಿಲಾಶಾಸನಗಳು ಭಾರತದಲ್ಲಿದ್ದು, ಅವುಗಳಲ್ಲಿ ಜನರು ಪ್ರಾಣಿವಧೆ ಮಾಡಬಾರದೆಂದು ಬರೆಯಿಸಿದ್ದಾನೆ. ಅವನಂತೆಯೇ ಶೈವರು ಮುಖ್ಯವಾಗಿ ಶಿವಶರಣರು ಅಹಿಂಸೆಯನ್ನು ನಾಡಿನಲ್ಲಿ ಬಹಳ ಪ್ರಸಾರ ಮಾಡಿದರು. ಅವರು ಪ್ರಾಣಿಗಳ ವಿಷಯವಾಗಿ ಅತ್ಯಂತ ದಯಾಭಾವವುಳ್ಳವರಾಗಿ ಆಚರಿಸಿದರು. ಹಿಂಸೆಯು ಮಹತ್ಪಾಪವೆಂದು ಅವರು ಸಾರಿದರು. ಈ ತರದ ಆಚರಣೆಯು ದೇಶದ ನಾಗರಿಕತೆಯ ಸ್ಥಿತಿಯನ್ನು ತೋರಿಸುತ್ತದೆ.

ಜೈನರು ಮೊದಲು ಮಿಥಿಲಾ, ಆ ಮೇಲೆ ಗುಜರಾಥ ಈ ದೇಶಗಳಲ್ಲಿ ನೆಲಿಸಿ, ಮುಂದೆ ಕ್ರಮೇಣ ಮೈಸೂರು ಮತ್ತು ದ್ರಾವಿಡ ದೇಶಗಳನ್ನು ವಸಾಹತು ಮಾಡಿದರು. ಈ ದೇಶಗಳಲ್ಲಿಯವರು ಜೈನರ ಅಹಿಂಸಾ ಮಾರ್ಗವನ್ನು ಅಂಗೀಕರಿಸಿ, ಮಾಂಸಾಹಾರವನ್ನು ವರ್ಜಿಸಿ, ಶಾಕಾಹಾರಿಗಳಾದರು. ಆದರೆ ಜೈನ ಮತ್ತು ಬೌದ್ಧಧರ್ಮಗಳ ಪ್ರಸಾರವಿಲ್ಲದ ಉತ್ತರ ಭಾರತದಲ್ಲಿ ಅಂದರೆ ರಜಪೂತಸ್ಥಾನ, ಪಂಜಾಬ, ಬಂಗಾಲಗಳಲ್ಲಿ ಈ ಸ್ಥಿತಿಯು ಇರದೆ, ಮಾಂಸಾಹಾರವು ಅಥವಾ ಮತ್ಸ್ಯಾಹಾರವು ಈಗಲೂ ಹೆಚ್ಚಾಗಿ ರೂಢವಾಗಿರುವದು ಕಂಡುಬರುತ್ತದೆ.

ಆದರೆ ಮುಂದೆ ಬರಬರುತ್ತ ಈ ತರದ ಹಿಂಸಾ ವೃತ್ತಿಯು ಸರಿಯಾದ ಮಾರ್ಗವಲ್ಲ, ಚರಾಚರ ವಸ್ತುಗಳಲ್ಲೆಲ್ಲ ಪರಮಾತ್ಮನಿರುತ್ತಾನೆಂಬ ತತ್ವವು ಪ್ರಸಾರವಾಗಹತ್ತಿತು. ಇದು ಅದ್ವೈತ ಮಾರ್ಗದ ಪರಿಣಾಮವೇ ಸರಿ. ಈ ತತ್ವವು ಪ್ರಸಾರವಾದ ಹಾಗೆ ಪ್ರಾಣಿಗಳ ವಧೆಯು ಯೋಗ್ಯವಲ್ಲವೆಂಬುದು ಜನರ ಮನಸ್ಸಿಗೆ ತೋರಹತ್ತಿತು. ಇಂಥ ಕಾಲದಲ್ಲಿ ಭಾರತದಲ್ಲಿ, ತತ್ವಜ್ಞರಲ್ಲಿ ಅತ್ಯಂತ ಶ್ರೇಷ್ಠ ಸ್ಥಾನವನ್ನು ಹೊಂದಿದ ಶಂಕರಾಚಾರ್ಯರೂ ಅದರಂತೆಯೇ ಶಿವಶರಣರೂ ಈ ತತ್ವವನ್ನೇ ಬೋಧಿಸಿದರು. ಇದರಿಂದ ಪ್ರಾಣಿಗಳಲ್ಲಿ ದಯಾಭಾವವನ್ನಿಟ್ಟು ನಡಿಯಬೇಕೆಂಬ ಮನೋವೃತ್ತಿಯು ಉಂಟಾಗಹತ್ತಿತು. ಕ್ರೂರ ದೇವತೆಗಳಿಗೆ ಬಲಿಕೊಡುವದು ಯೋಗ್ಯವಲ್ಲವೆಂದು ಜನರಿಗೆ ತೋರಹತ್ತಿತು. ಶರಣರ ಕಾಲದಲ್ಲಿ ಅಂದರೆ ೧೧ ನೇ ಶತಮಾನದಲ್ಲಿ ಕರ್ನಾಟಕದಲ್ಲಿ ಆಗಿಹೋದ ಶಿವಶರಣರು ಅಹಿಂಸಾಚಾರವನ್ನು ಬಹು



ಬಲವಾಗಿ ಬೋಧಿಸುವವರಾದರು. ದೇವರ ದಾಸಿಮಯ್ಯನು ತನ್ನ ಉಕ್ತಿಗಳಲ್ಲಿ ಪ್ರಾಣಿಗಳಲ್ಲಿ ದಯಾಭಾವವಿರಬೇಕೆಂಬ ತತ್ವವನ್ನು ಪ್ರತಿಪಾದಿಸಿದ್ದು ಕಂಡು ಬರುತ್ತದೆ. ಬಸವೇಶ್ವರನು ತನ್ನ ಒಂದು ವಚನದಲ್ಲಿ ಹೇಳಿರುವದೇನೆಂದರೆ:-

"ದಯವಿಲ್ಲದ ಧರ್ಮವದಾವುದಯ್ಯಾ ? ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ. ದಯವೇ ಧರ್ಮದ ಮೂಲವಯ್ಯ. ಕೂಡಲಸಂಗಮದೇವನಂತಲ್ಲದವರನೊಲ್ಲನಯ್ಯ "

ಇದರಲ್ಲಿ ಬಸವೇಶ್ವರನು ದಯಾಭಾವವು ಎಷ್ಟು ಮಹತ್ವದ್ದಿದೆಂಬುದನ್ನು ಚನ್ನಾಗಿ ಹೇಳಿದ್ದಾನೆ. ಧರ್ಮವು ದಯಾಭಾವವನ್ನು ಬೋಧಿಸದಿದ್ದರೆ ಅದು ಧರ್ಮವಲ್ಲೆಂದು ಅವನು ಹೇಳುತ್ತಾನೆ.

ಆಗಮ ಧರ್ಮವು ಒಂದುಕಾಲದಲ್ಲಿ ಕರ್ನಾಟಕ ಮತ್ತು ದ್ರಾವಿಡ ದೇಶಗಳಲ್ಲಿ ಹೆಚ್ಚಾಗಿ ಬೆಳೆಯಿತು. ಅಗಮ ಧರ್ಮಾನುಯಾಯಿಗಳು ಯಜ್ಞಗಳನ್ನು ನಿಷೇಧಿಸುವವರಾದರು. ಅವರು ಶಿವಮತದ ಪ್ರಸಾರಕರಾದರು. ಶಿವನೇ ದೈವವೆಂದು ಅವರು ನಂಬುವರು. ಶಿವನ ಹೆಂಡತಿಯು ಕಾಳಿಕಾದೇವಿಯು. ಆದರೆ ಈ ಹೆಸರಿನ ದೇವತೆಗಳು ಕ್ರೂರ ಮತ್ತು ಉಗ್ರವಾದವುಗಳು. ಇವುಗಳಿಗೆ ಬಲಿಕೊಡುವ ಪದ್ಧತಿಯು ಭಾರತ ದೇಶದಲ್ಲಿ ಯಾವಾಗಲೂ ಇದೆ. ಆದರೆ ಶಿವಶರಣರು ಹೀಗೆ ಇವುಗಳಿಗೆ ಬಲಿಕೊಡುವದನ್ನು ನಿಷೇಧಿಸಿದರು. ಶಿವನು ಸರ್ವ ವ್ಯಾಪಿ ಎಂದು ಅವರು ಭಾವಿಸಿ ಆತನು ತಮ್ಮ ತನು ಮನ ಭಾವಗಳಲ್ಲಿ ಅನುಕ್ರಮವಾಗಿ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ರೂಪಾಗಿದ್ದಾನೆಂದು ತಿಳಿದು ಧ್ಯಾನ ಮಾಡುತ್ತಾರೆ. ಆದ್ದರಿಂದ ಅವರು ಶಿವನನ್ನು ತಮ್ಮಲ್ಲಿಯೇ ಕಾಣಲು ಬರುತ್ತದೆಂಬ ತತ್ವವನ್ನು ಸಾರಿದರು.

## ದೇವರ ದಾಸಿಮಯ್ಯ

ಕ್ರಿ. ಶ. ೧೦೦೮ ರಿಂದ ೧೦೪೨ ರವರೆಗೆ ಪೊಟ್ಟಲಕೆರೆಯಲ್ಲಿ ರಾಜ್ಯವಾಳಿದ ಚಾಲುಕ್ಯ ಜಯಸಿಂಹನ ಕಾಲದಲ್ಲಿ ದೇವರದಾಸಿಮಯ್ಯನೆಂಬ ಶಿವಶರಣನು ಇದ್ದು ಅವನುತನ್ನ ವಚನದಲ್ಲಿ ಹೇಳಿದ್ದೇನೆಂದರೆ:—

"ನಾನೊಂದು ಸುರಿಗಿಯನೇನೆಂದು ಹಿಡಿವೆನು ? ಏನ ಕಿತ್ತೇನ ನಿರಿವೆನು ? ಜಗವೆಲ್ಲ ನೀನಾಗಿಪ್ಪೆ ಕಾಣಾ ರಾಮನಾಥಾ "

ಅಂದರೆ ನಾನು ಕತ್ತಿಯನ್ನು ಏಕೆ ಹಿಡಿಯಬೇಕು ? ನಾನು ಏನನ್ನು ಕಿತ್ತು ಏನನ್ನು ಇರಿಯಬೇಕು ? ಎಲೋ ಪರಮಾತ್ಮನೇ ಜಗವೆಲ್ಲ ನೀನೇ ಆಗಿದ್ದೀ.

ಶಿವಶರಣರು ಈ ತರದ ವಿಚಾರಗಳನ್ನು ಪ್ರಸಾರ ಮಾಡಿದ್ದಾರೆ. ಇದರಿಂದ ಅಹಿಂಸಾ ಧರ್ಮವು ಕರ್ನಾಟಕದಲ್ಲಿ ಬೆಳೆಯುತ್ತ ಬಂದಿತು.

ದೇವರದಾಸಿಮಯ್ಯನು ಮೊದಲು ಶ್ರೀಶೈಲದಲ್ಲಿ ಇದ್ದು ಅಲ್ಲಿ ತಪಸ್ಸು ಮಾಡುತ್ತಾ ಇದ್ದನು. ಅಲ್ಲಿ ಅವನು ಇದ್ದಾಗ ಪರಮಾತ್ಮನು ಅವನ ನಿಷ್ಠೆಗೆ ಮೆಚ್ಚಿ ಅವನಿಗೆ ಪ್ರತ್ಯಕ್ಷನಾಗಿ ನಿನ್ನ ಇಷ್ಟವೇನೆಂದು ಕೇಳಲಾಗಿ ದೇವರ ದಾಸಿಮಯ್ಯನು ತನಗೆ ಮುಕ್ತಿಯ ಮಾರ್ಗವನ್ನು ತೋರಿಸಬೇಕೆಂದು ಬೇಡಿಕೊಂಡನು. ಆಗ ಪರಮಾತ್ಮನು ಅವನಿಗೆ ಕಷ್ಟಕರವಾದ ಈ ತಪಸ್ಸನ್ನು ನೀನು ಆಚರಿಸಬೇಡ. ಇಷ್ಟ, ಪ್ರಾಣ, ಭಾವಲಿಂಗಗಳ ರೀತಿಯನ್ನು ಅರಿತು ವರ್ತಿಸು, ಎಂದು ಹೇಳಿ ಅವನಿಗೆ ಲಿಂಗದ ರೀತಿಯನ್ನು ತಿಳಿಸಿ ದೀಕ್ಷೆಯನ್ನು ಮಾಡಿದನು. ಮುಂದೆ ದೇವರದಾಸಿಮಯ್ಯನು ವಿರಕ್ತಾಶ್ರಮಿಯಾಗಿ ಲಿಂಗದ ನೆಲೆ ಕಲೆಗಳನ್ನು ಅರಿತುಕೊಂಡು ಶ್ರೀಶೈಲದಲ್ಲಿ ಶ್ರೀಮಲ್ಲಿಕಾರ್ಜುನನ ಸನ್ನಿಧಿಯಲ್ಲಿ ಕೆಲವು ಕಾಲವಿದ್ದು ಸ್ವಗ್ರಾಮವಾದ ಕಲಬುರ್ಗಿ ಜಿಲ್ಲೆಯಲ್ಲಿರುವ ಮುದನೂರಿಗೆ ಹೊರಡುವವನಾದನು. ಅವನು ಕಾಡಿನಲ್ಲಿ ಬೇಟೆಯಾಡುತ್ತ ಮೃಗಗಳನ್ನು ಕೊಂದು ಅವುಗಳ ಮಾಂಸವನ್ನು ತಿಂದು ಉಪಜೀವಿಸುತ್ತಿದ್ದ ಕಾಡುಜನರ ತಂಡಗಳನ್ನು ನೋಡಿದನು. ಅವರ ಕೀಳು ವೃತ್ತಿಯನ್ನು ನೋಡಿ ಅವನಿಗೆ ಕನಿಕರವುಂಟಾಗಿ ಇವರಿಗೆ ಅಹಿಂಸಾ ಧರ್ಮವನ್ನು ಬೋಧಿಸಬೇಕೆಂದು ಅವರನ್ನು ತನ್ನ ಬಳಿಯಲ್ಲಿ ಕುಳ್ಳಿರಿಸಿಕೊಂಡು ಹೇಳಿದುದೇನೆಂದರೆ—

“ಬೇಟೆಗಾರರೇ, ನಿಮ್ಮ ಸಾಹಸವು ಬಲು ಹೆಚ್ಚಿನದು. ನೀವು ಶೂರರು. ಆದರೆ ನಿಮ್ಮದು ದುರಿತ ಕರ್ಮವು. ಇದರಿಂದ ನೀವು ನರಕದಲ್ಲಿ ಯಾವಾಗಲೂ ತೊಳಲಾಡುವಿರಿ. ಇಹದಲ್ಲಿಯೂ ಪರದಲ್ಲಿಯೂ ನೀವು ದುರ್ಗತಿಗಿಳಿಯುವಿರಿ. ನೀವು ಬಲವಂತವಾಗಿ ಪ್ರಾಣಿಗಳ ಹಿಂಸೆ ಮಾಡಬೇಡಿರಿ. ಇದು ಬಹು ಪಾಪ ಕರ್ಮವು. ಇದರಿಂದ ಜನ್ಮ ಜನ್ಮಗಳಲ್ಲಿಯೂ ನೀವು ನಿಮ್ಮ ಸಂಕಟಗಳಿಂದ ಮುಕ್ತರಾಗಲಾರಿರಿ. ನಿಮ್ಮಲ್ಲಿ ಮದನ ಹರನ ಚಿಂತೆಯು ಇರಬೇಕು. ತಲ್ಲಿಂಗ ಪೂಜಾ ಧ್ಯಾನದಲ್ಲಿ ನೀವು ಇರಬೇಕು. ಪರಶುರಾಮನ ಶಾಪದಿಂದ ನಿಮ್ಮ ಜೀವಿತದಲ್ಲಿ ಬಹು ಕಷ್ಟಪಡುತ್ತಾ ಇದ್ದೀರಿ. ನೀವು ಅವನ ಶಾಪದಿಂದ ಮುಕ್ತರಾಗಬೇಕಾದರೆ ನಿಮ್ಮ ಈ ಹಿಂಸಾ ಕರ್ಮವನ್ನು ಬಿಟ್ಟುಕೊಟ್ಟು ಶಮೆ, ದಮೆ, ದಾನ-ಧರ್ಮಗಳಲ್ಲಿ ಇರಬೇಕು. ನೀವು ಸದ್ಗುರು ಪಾದವನ್ನು ನಂಬಬೇಕು. ನೀವು ಈ ದುಷ್ಟ ಹಿಂಸಾ ವೃತ್ತಿಯನ್ನು ಬಿಟ್ಟು



ಬಿಡಬೇಕು. ಹೀಗೆ ನಡೆದಲ್ಲಿ ನೀವು ಮೋಕ್ಷವನ್ನು ಹೊಂದುವಿರಿ.” ಈ ಪ್ರಕಾರ ದಾಸಿಮಯ್ಯನು ಅವರಿಗೆ ಬೋಧಿಸಲಾಗಿ ಆ ಕಾಡು ಜನರ ಮನೋವೃತ್ತಿಯು ಬದಲಾಯಿತು. ಆಗ ಅವರು ತಮಗೆ ನೀವು ಯಾವ ಮಾರ್ಗವನ್ನು ತೋರಿಸುವಿರಿ ಎಂದು ಕೇಳಲಾಗಿ ಅವನು-“ನೀವು ಇನ್ನು ಮೇಲೆ ನಿಮ್ಮ ಹಿಂಸಾ ಕರ್ಮಗಳನ್ನು ಬಿಟ್ಟು, ತಿಲಗಾಣವನ್ನು ಆಡಿಸಿ, ತೈಲವನ್ನು ತೆಗೆದು ಶ್ರೀ ಮಲ್ಲಿಕಾರ್ಜುನ ಲಿಂಗಕ್ಕೆ ಎರೆಯುತ್ತ ಹೋಗಬೇಕು. ಇದನ್ನೇ ನೀವು ಸತ್ಕಾಯಕವನ್ನಾಗಿ ಇಟ್ಟುಕೊಳ್ಳಬೇಕು.” ಎಂದು ಬೋಧಿಸಿದನು. ಆಗ ಈ ಕಾಡು ಜನರು ತಮ್ಮ ಹಿಂಸಾಚಾರಗಳನ್ನು ಬಿಟ್ಟು ಕೊಟ್ಟು ತಿಲಕಾಯಕವನ್ನು ಕೈಕೊಂಡು, ಪರ್ವತ ಸಿಂಹಾಸನಕ್ಕೆ ನಡೆದುಕೊಳ್ಳಹತ್ತಿದರು.

ಮುಂದೆ ದೇವರ ದಾಸಿಮಯ್ಯನು ಹೀಗೆ ಕಾಡು ಜನರಿಗೆ ಬೋಧಿಸಿ, ಮುಂದೆ ಗೌಡಗೆರೆ ಎಂಬ ಗ್ರಾಮಕ್ಕೆ ಬಂದನು. ಅಲ್ಲಿದ್ದವರು ಒಕ್ಕಲುತನವನ್ನು ಮಾಡುತ್ತಲಿದ್ದು, ಕಿಸುಕುಳವನ್ನು ತಿನ್ನುತ್ತ ದುಷ್ಟಟಗಳಿಂದ ತುಂಬಿಕೊಂಡವರಾಗಿ ಆಚರಿಸುತ್ತಿದ್ದರು. ಅವರ ಅಶುದ್ಧ ರೀತಿಗಳನ್ನು ನೋಡಿ, ದೇವರ ದಾಸಿಮಯ್ಯನು ಅವರಿಗೆ—“ನಿಮ್ಮ ಕೃಷಿಕಾಯಕವನ್ನೇ ಇಟ್ಟುಕೊಳ್ಳಿರಿ. ಆದರೆ ನೀವು ಹಿಂಸಾಯುಕ್ತ ಅಶುದ್ಧ ಆಚಾರಗಳನ್ನು ಬಿಟ್ಟುಕೊಡಬೇಕು. ಪ್ರಮಥ ಗಣಗಳಲ್ಲಿ ವಿಶ್ವಾಸವನ್ನಿಟ್ಟು, ಶ್ರೀಶೈಲ ಮಲ್ಲಿಕಾರ್ಜುನನಿಗೆ ನಡೆದುಕೊಳ್ಳಿರಿ” ಎಂದು ಬೋಧಿಸಿ, ಅವರಿಗೆ ದೀಕ್ಷಾ ಸಂಸ್ಕಾರವನ್ನು ಮಾಡಿ, ಮುಂದಕ್ಕೆ ತನ್ನ ಗ್ರಾಮದ ಕಡೆಗೆ ತೆರಳುವವನಾದನು. ಅಂದಿನಿಂದ ಅವರೆಲ್ಲರೂ ಶುದ್ಧ ಶಾಕಾಹಾರಿಗಳಾಗಿ, ಭಕ್ತಿಯುತರಾಗಿ ಜೀವಿಸಹತ್ತಿದರು.

## ಬಸವೇಶ್ವರ

ಶಿವಶರಣರು ಜೀವ ಹಿಂಸೆಯನ್ನು ನಿಷೇಧಿಸಿರುವದರಿಂದ ಯಜ್ಞಯಾಗಾದಿಗಳನ್ನು ಮಾಡಕೂಡದೆಂದು ಅವರು ಬಹು ದೃಢವಾಗಿ ತಮ್ಮ ವಚನಗಳಲ್ಲಿ ಹೇಳುತ್ತ ಬಂದಿದ್ದಾರೆ. ಬಸವೇಶ್ವರನ ಕಾಲದಲ್ಲಿ ಅಂದರೆ ಸುಮಾರು ೮೦೦ ವರ್ಷಗಳ ಹಿಂದೆ ಯಜ್ಞಗಳನ್ನು ಮಾಡುವ ಪದ್ಧತಿಯು ನಮ್ಮ ದೇಶದಲ್ಲಿ ಬಹಳ ಪ್ರಚಲಿತವಾಗಿತ್ತು. ಆಗಿನ ರಾಜರು ಯಜ್ಞಗಳನ್ನು ಮಾಡಲಿಕ್ಕೆ ಯಾವಾಗಲೂ ಉತ್ತೇಜನ ಕೊಡುತ್ತಿದ್ದರು. ಅವುಗಳಿಂದ ತಮಗೆ ಪುಣ್ಯ ಬರುತ್ತದೆಂದು ಅವರೂ ಅವರಂತೆಯೇ ಸಾಮಾನ್ಯ ಜನರೂ ಭಾವಿ

ಸಿದ್ದರು. ಅದರೆ ಶಿವಶರಣರು ಪ್ರಾಣಿವಧೆ ಮಾಡಬಾರದೆಂತಲೂ, ಯಜ್ಞ ಮಾಡಬಾರದೆಂತಲೂ ಬೋಧಿಸುವರು. ಬಸವೇಶ್ವರನು ಈ ವಿಷಯವಾಗಿ ತನ್ನ ವಚನಗಳಲ್ಲಿ ಇಂಥ ಹಿಂಸಾ ಕ್ರಿಯೆಗಳನ್ನು ಅತ್ಯಂತ ಕಟು ಮಾತಿನಿಂದ ಟೀಕಿಸಿದ್ದಾನೆ. ಆವನು ಹೇಳುವದೇನಂದರೆ:—

(೧) ಕಿಚ್ಚು ದೈವವೆಂದು ಹವಿಯನಿಕ್ಕುವ ಹಾರುವರ ಮನೆಯಲು ಕಿಚ್ಚೆದ್ದು ಸುಡುವಾಗ ಬಚ್ಚಲ ನೀರ ಬೀದಿಯ ದೂಳವ ಹೊಯ್ದು ಬೊಬ್ಬಿಟ್ಟೆಲ್ಲರ ಕರೆವರಯ್ಯಾ. ಕೂಡಲಸಂಗಮದೇವನ ವಂದನೆಯ ಮರೆದು ನಿಂದಿಸುತಿರ್ದರಯ್ಯಾ.

(೨) ಇಟ್ಟಿಯ ಹಣ್ಣ ನರಿ ತಿಂದು, ಸೃಷ್ಟಿ ತಿರುಗಿತೆಂಬಂತೆ ಮುಟ್ಟಿಯನಿಟ್ಟ ದ್ವಿಜರ ಮಾತದೇಕೆ ? ಹಗಲು ಗಾಣದ ಗೂಗೆ ಇರುಳಾಯಿತೆಂದರೆ ಜಗಕ್ಕೆ ಇರುಳಪ್ಪುದೇ ಮರುಳೇ ! ಹೋಮದ ನೆವದಿಂದ ಹೋತನ ಕೊಂದು ತಿಂಬ ಅನಾಮಿಕರೊಡನಾಡಿ ಗೆಲವುದೇನು ಕೂಡಲಸಂಗಮದೇವ ?

(೩) ನಿಮ್ಮ ವಚನವೆಮ್ಮ ಪುಣ್ಯವೆಂಬುದು ಹುಸಿಯಾಯಿತ್ತು ನೋಡಾ. ಶಾಸ್ತ್ರದ ವಚನ ಹೋತಿಂಗೆ ಮಾರಿ. ಎಂತು ನಂಬುವೆನಯ್ಯ ? ನಾನು ಕೊಲ್ಲೆನು, ನೀಣು ಕೊಂದಿತ್ತೆಂಬ ಸೂನೆಗಾರರನೇನೆಂಬೆನಯ್ಯಾ ಕೂಡಲಸಂಗಮದೇವಾ?

(೪) ಮಾತಿನ ಮಾತಿಂಗೆ ನಿನ್ನ ಕೊಂದಿಹರೆಂದು ಎಲೆ ಹೋತೇ ಆಳು ಕಂಡಾ. ವೇದವನೋದಿದವರ ಮುಂದೆ ಅಳು ಕಂಡಾ. ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡಾ. ನೀನತ್ತುದಕ್ಕೆ ತಕ್ಕುದ ಮಾಡುವ ಕೂಡಲಸಂಗಮದೇವಾ.

(೫) ಮೊರನ ಗೊಟ್ಟಿಗೆ ಬಪ್ಪ ಕಿರುಕುಳ ದೈವಕ್ಕೆ ಕುರಿಯನಿಕ್ಕಿಹೆನೆಂದು ನಲಿನಲಿದಾಡುವರು. ಕುರಿ ಸತ್ತು ಕಾಯುವುದೇ ಹರ ಮುಳಿದವರ ? ಕುರಿ ಬೇಡ, ಮರಿ ಬೇಡ, ಬರಿಯ ಪತ್ರೆಯ ತಂದು ಮರೆಯದೆ ಪೂಜಿಸು ನಮ್ಮ ಕೂಡಲಸಂಗಮ ದೇವನ.

(೬) ಏನಯ್ಯಾ ವಿಪ್ರರು ನುಡಿದಂತೆ ನಡೆಯರು. ಇದೆಂತಯ್ಯಾ ತಮಗೊಂದು ಬಟ್ಟೆ, ಶಾಸ್ತ್ರಕೊಂದು ಬಟ್ಟೆ ಕೂಡಲಸಂಗಮದೇವಯ್ಯ?



ಹೊಲೆಯರ ಬಸಿರಲ್ಲಿ ವಿಪ್ರರು ಹುಟ್ಟಿ, ಗೋಮಾಂಸವ ತಿಂಬರೆಂಬುದಕ್ಕೆ ಇದೇ ದೃಷ್ಟ.

ಈಪ್ರಕಾರ ಬಸವೇಶ್ವರನು ತನ್ನ ವಚನಗಳಲ್ಲಿ ಯಜ್ಞಯಾಗಾದಿಗಳನ್ನು ನಿಷೇಧಿಸುತ್ತ ಅಲ್ಲಿ ನಡೆಯುವ ಹಿಂಸಾಚಾರಗಳನ್ನು ಕಟುವಾದ ಶಬ್ದಗಳಿಂದ ಟೀಕಿಸಿದ್ದಾನೆ.

ಬಸವೇಶ್ವರನು ತನ್ನ ಇನ್ನೊಂದು ವಚನದಲ್ಲಿ ಕೆಳಗಿನಂತೆ ಹೇಳಿದ್ದಾನೆ:-

(೧) ಕೊಲ್ಲೆನಯ್ಯಾ ಪ್ರಾಣಿಗಳ. ಮೆಲ್ಲೆನಯ್ಯಾ ಬಾಯಿಚ್ಛೆಗೆ, ಒಲ್ಲೆನಯ್ಯಾ. ಪರಸತಿಯರ ಸಂಗವ ಒಲ್ಲೆನಯ್ಯಾ, ಮುಂದೆ ತೊಡಕುಂಟೆಂಬುದ. ಬಳ್ಳದ ಬಾಯಂತೆ ಒಂದೆ ಮನವ ಮಾಡಿ ನಿಲ್ಲೆಂದು ನಿಲ್ಲಿಸಯ್ಯಾ ಕೂಡಲಸಂಗಮದೇವಾ.

(೨) ಅರಿದರಿದು ಸಮಗಾಣಿಸಬಾರದು ತ್ರಾಸಿನ ಕಟ್ಟಳೆಯಂತೆ. ಇನಿತು ವೆಗ್ಗಳವಾದರೆ ಈಶ್ವರ ನೋಡಿ ಇಕ್ಕದೆ ಮಾಣ್ಬನೇ ? ಪಾತ್ರಾಪಾತ್ರವೆಂದು ಕಂಡಡೆ ಶಿವನೆಂತು ಮೆಚ್ಚುವನು ? ಜೀವ ಜೀವಾತ್ಮನಸಂ ಎಂದು ಕಂಡರೆ ಸಮವೇಧಿಸದಿಪ್ಪನೆ ಶಿವನು ? ತನ್ನ ಮನದಲ್ಲಿ ಯತ್ರ ಜೀವಸ್ತತ್ರ ಶಿವನೆಂದು ಸರ್ವ ಜೀವ ದಯಾ ಪಾರಿಯಾದಡೆ, ಕೂಡಲಸಂಗಮದೇವ ಕೈಲಾಸದಿಂದ ಬಂದು ಎತ್ತಿಕೊಳ್ಳನೆ ಅವರನು?

ಈ ಮೇರೆಗೆ ಬಸವೇಶ್ವರನು ಅನೇಕ ವಿಧವಾಗಿ ಜೀವ ಹಿಂಸೆಯನ್ನು ಮಾಡಬಾರದೆಂದು ನುಡಿದಿದ್ದಾನೆ.

## ಮರುಳಸಿದ್ಧ

ಜಗದ್ಗುರುವಾದ ಮರುಳಸಿದ್ಧನು ಶಿವಶರಣರಲ್ಲಿ ಉಚ್ಚ ಸ್ಥಾನವನ್ನು ಹೊಂದಿದ್ದಾನೆ. ಆವನ ವೃತ್ತಾಂತವನ್ನು ವಿವರಿಸುವ ಪುರಾಣವು ಒಂದಿರುತ್ತದೆ. ಅವನು ಅಸ್ಪೃಶ್ಯರಲ್ಲಿ ಜನಿಸಿದ್ದರೂ ಮುಂದೆ ರೇವಣಸಿದ್ಧೇಶ್ವರನಿಂದ ವೀರಶೈವ ದೀಕ್ಷೆಯನ್ನು ಹೊಂದಿ, ಜೀವ ಹಿಂಸೆಯನ್ನು ಮಾಡಬಾರದೆಂದು ಅದನ್ನು ನಿಷೇಧಿಸುವವನಾದನು. ಅವನು ಸಿದ್ಧ ಪುರುಷನಾಗಿ ದೇಶದಲ್ಲಿ ಸಂಚಾರ ಮಾಡುತ್ತ ಅನೇಕ ಸಿದ್ಧಿಗಳನ್ನು ಸಾಧಿಸಿ, ಪ್ರಸಿದ್ಧನಾಗಿರುವನು. ಅವನು ಮಧ್ಯ ಕರ್ನಾಟಕ ಭಾಗದಲ್ಲಿ ಶಿವಶರಣರ ತತ್ವಗಳನ್ನು ಪ್ರಚಾರ ಮಾಡಿದ್ದಾನೆ. ಈ ಭಾಗದಲ್ಲಿ ಕುರುಡುಗೆ ಎಂಬ ಒಂದು ಗ್ರಾಮವಿದ್ದು, ಅದು ದಾವಣಗೆರೆ ತಾಲೂಕಿನಲ್ಲಿದೆ. ಈ ಊರಿನ ಬ್ರಾಹ್ಮಣರು ಯಜ್ಞ ಮಾಡುತ್ತಿರುವದನ್ನು ಮರುಳಸಿದ್ಧನು ನೋಡಿ ಇಂಥ ಹಿಂಸಾ ಕಾರ್ಯವನ್ನು

ನೀವು ಮಾಡಬೇಡಿರೆಂದು ವಿಡಂಬಿಸಿ ಅವರಿಗೆ ನುಡಿಯಹತ್ತಲು ಬ್ರಾಹ್ಮಣರು ಕೋಪಗೊಂಡು ಅವನ ಕೈಕಾಲು ಕಟ್ಟಿ ಅಣಬಿ ಗ್ರಾಮದ ಹತ್ತಿರಿದ್ದ ಒಂದು ಕೆರೆಯಲ್ಲಿ ಹಾಕಿದರು. ಆದರೆ ಮರುಳಸಿದ್ಧನು ಮತ್ತೆ ಬದುಕಿ ಹೊರಗೆ ಬರಲು ಬ್ರಾಹ್ಮಣರು ರಾಜನಲ್ಲಿ ದೂರು ಹೇಳಲಾಗಿ ರಾಜನು ಮರುಳಸಿದ್ಧನ ಮೇಲೆ ಆನೆಯೊಂದನ್ನು ಹಾಯಿಸಲು ಮರುಳಸಿದ್ಧನು ತನ್ನ ಸಾಮರ್ಥ್ಯದ ಮೂಲಕ ಅದರಲ್ಲಿ ಜಯಶೀಲನಾಗಿ ಜೀವದಿಂದುಳಿದನು. ಹೀಗೆ ಅವನ ಬಗ್ಗೆ ಐತಿಹ್ಯವಿರುತ್ತದೆ. ಮರುಳಸಿದ್ಧನು ಪಂಚಾಚಾರ್ಯರಲ್ಲಿ ಒಬ್ಬನಾಗಿ ಪ್ರಸಿದ್ಧನಾಗಿದ್ದಾನೆ.

## ಮಹಾದೇವಿಯಕ್ಕ

ಶಿವಶರಣ ಶರಣೆಯರಲ್ಲಿ ಅತ್ಯಂತ ಪ್ರಸಿದ್ಧಿಯನ್ನು ಹೊಂದಿದ ಮಹಾದೇವಿಯಕ್ಕನಾದರೂ ಜೀವ ಹಿಂಸೆ ಮಾಡಬಾರದೆಂದು ತನ್ನ ವಚನದಲ್ಲಿ ಹೇಳಿದ್ದಾಳೆ. ಅವಳು ಹೇಳಿರುವದೇನೆಂದರೆಃ—

ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ ಹಲವು ಪ್ರಾಣಿಗಳ ಕೊಂದು ನಲಿನಲಿದಾಡುವ! ತನ್ನ ಮನೆಯಲೊಂದು ಶಿಶು ಸತ್ತರೆ ಅದಕ್ಕೆ ಮರುಗುವಂತೆ ಅವಕೇಕೆ ಮರುಗನು? ಅದೆಂತೆಂದೊಡೆ, "ಸ್ವಾತ್ಮನಾಮಿವೇತರಶ್ಚೈವ ದೃಷ್ಟ್ವಾ ನಿತ್ಯಾದಿ ಭಿನ್ನತೆ ಸರ್ವಂ ಚಿಜ್ಯೋತಿ ದೇವೇತಿ ಯಃ ಪಶ್ಯತಿ ಸಪಶ್ಯತಿ" ಎಂದುದಾಗಿ ಜಾಲಗಾರನ ದುಃಖ ಜಗಕ್ಕೆಲ್ಲ ನಗೆಗೇಡೆ. ಇದು ಕಾರಣ ಚನ್ನಮಲ್ಲಿಕಾರ್ಜುನಯ್ಯನ ಭಕ್ತನಾಗಿರ್ದು ಜೀವ ಹಿಂಸೆಯ ಮಾಡುವ ಮಾದಿಗರನೇನೆಂಬೆನಯ್ಯಾ?

ಇದರಲ್ಲಿ ಮನುಷ್ಯನು ತನ್ನ ಮಕ್ಕಳನ್ನು ಹೇಗೆ ಪ್ರೀತಿಸುತ್ತಾನೋ ಹಾಗೆಯೇ ಪ್ರಾಣಿಗಳನ್ನು ಸಹ ಪ್ರೀತಿಸಬೇಕೆಂದು ಮಹಾದೇವಿಯಕ್ಕನು ಹೇಳಿದ್ದಾಳೆ. ದಯೆಯುಳ್ಳವನಾಗಿರುವದು ಭಕ್ತನಾಚರಣೆ ಎಂದು ಅವಳ ಅಭಿಪ್ರಾಯವು. ಹೀಗೆ ಆಚರಿಸದೇ ಇದ್ದವರು ಮಾದಿಗರೇ ಸರಿ ಎಂದು ಅವಳು ಇಲ್ಲಿ ಅನ್ನುತ್ತಾಳೆ.

## ಸಕಲೇಶ ಮಾದರಸ

ಸಕಲೇಶ ಮಾದರಸನೆಂಬ ವಚನಕಾರನು ಹೇಳಿರುವದೇನೆಂದರೆಃ— ಜೀವಿಗಳು ಪರಮಾತ್ಮನಿಗೆ ನಿಕಟ ಸಂಬಂಧವುಳ್ಳವಿರುತ್ತವೆ. ಹೇಗೆ ಬೆಟ್ಟದ ಮೇಲಿರುವ ವೃಕ್ಷಗಳು ಬೆಟ್ಟವನ್ನವಲಂಬಿಸಿ ಬೆಳೆಯುತ್ತವೆಯೋ ಹಾಗೆಯೇ ಪ್ರಾಣಿಗಳೆಲ್ಲ ಪರಮಾತ್ಮನನ್ನು ಅವಲಂಬಿಸಿ ಪೋಷಣೆ ಹೊಂದುತ್ತವೆ. ಆದ್ದರಿಂದ ಪ್ರಾಣಿಗಳನ್ನು ಹಿಂಸಿಸುವದು ಪರಮಾತ್ಮನನ್ನು ಹಿಂಸಿಸಿದಂತೆಯೇ ಸರಿ, ಅದು ಪಾಪ ಕರ್ಮವು, ಎಂದು ವಚನಕಾರರ ಅಭಿಪ್ರಾಯವಿದೆ. ಪ್ರಾಣಿಗಳು ಮನುಷ್ಯನನ್ನು ನೋಡಿದ ಕೂಡಲೆ ಅವನನ್ನು ಪ್ರೀತಿಸದೆ ಅವನಿಗೆ ಅಂಜಿ ಅವನನ್ನು ಬಿಟ್ಟು ಅವನಿಂದ ದೂರ ಓಡಿ ಹೋಗುತ್ತವೆ. ಯಾಕಂದರೆ ಮನುಷ್ಯನು ಕೆಡುಕನು, ಆದ್ದರಿಂದ ಅಂಥವನ ಸಂಗತಿಯು ತಮಗೆ ಬೇಡವೆಂದು ಅವು ಓಡಿ ಹೋಗುತ್ತವೆ. ಇಂಥ ನಿರುಪದ್ರವಿ ಪ್ರಾಣಿಗಳನ್ನು ಹಿಡಿದು ಕೊಂದರೆ ಈಶ್ವರನು ಹೀಗೆ ಕೊಲ್ಲುವವರನ್ನು ನರಕದಲ್ಲಿ ಇಕ್ಕದೆ ಬಿಡುವನೇ? ಎಲ್ಲ ಪ್ರಾಣಿಗಳನ್ನು ಸಂರಕ್ಷಿಸುವಾತ ನಮ್ಮ ಪರಮಾತ್ಮನಿದ್ದಾನೆ. ಈ ಪ್ರಕಾರ ಸಕಲೇಶ ಮಾದರಸನೆಂಬ ಒಬ್ಬ ಪ್ರಸಿದ್ಧ ಶಿವಶರಣನು ಹೇಳುತ್ತಾನೆ. ಆ ವಚನವು ಯಾವುದೆಂದರೆಃ—

ಬೆಟ್ಟದ ಮೇಲಣ ಗಿಡಗಳು ಬೆಟ್ಟವ ಮುಟ್ಟದಂತಿಪ್ಪವೇ? ವಿವರಿಸಿ ನೋಡಿದಡೆ ಸೃಷ್ಟಿಯೊಳಗಣ ಪ್ರಾಣಿಗಳು ಪರಮನ ಮುಟ್ಟದಿಪ್ಪವೇ? ಕಪ್ಪರು ಬೇಡವೆಂದು ಬಿಟ್ಟೋಡುತಿಪ್ಪ ಪ್ರಾಣಿಗಳನಟ್ಟಿ ಹಿಡಿದುಕೊಂದರೆ ಪ್ರತಿಷ್ಠಿಸಿದೀಶ್ವರನಿಕ್ಕದಿರ್ಪನೇ ನರಕದಲ್ಲಿ? ಸಕಲ ಪ್ರಾಣಿಗಳ ಮೇಲಾರೈಕೆ ನಮ್ಮ ಸಕಳೇಶ್ವರನಲ್ಲದೆ ಮತ್ತೊಬ್ಬರುಂಟೆ?

ಈ ಸಕಲೇಶ ಮಾದರಸನು ಮೊದಲು ಒಂದು ರಾಜ್ಯದ ಅರಸನಾಗಿದ್ದು ಮುಂದೆ ಅವನು ತನ್ನ ಅರಸುತನವನ್ನು ಬಿಟ್ಟುಕೊಟ್ಟು ಶ್ರೀಶೈಲ ಪರ್ವತಕ್ಕೆ ಬಂದು ಅಲ್ಲಿ ಕೆಲವು ಕಾಲ ತಪಸ್ಸನ್ನಾಚರಿಸಿದನು. ಮುಂದೆ ಅವನು ಬಸವೇಶ್ವರನ ಸನ್ನಿಧಿಯಲ್ಲಿರಬೇಕೆಂದು ಬಯಸಿ ಕಲ್ಯಾಣಕ್ಕೆ ಬಂದು ಅವನಲ್ಲಿ ಒಬ್ಬ ಪ್ರಸಿದ್ಧ ವಚನಕಾರನಾದನು.

## ಕಿನ್ನರೀಬ್ರಹ್ಮಯ್ಯ.

ಕಿನ್ನರೀ ಬ್ರಹ್ಮಯ್ಯನೆಂಬ ಇನ್ನೊಬ್ಬ ಶಿವಶರಣನು ಮೂಡೂರು ಎಂಬ ಗ್ರಾಮದಲ್ಲಿ ಅಕ್ಕಸಾಲಿಗನ ಕೆಲಸ ಮಾಡುತ್ತಿದ್ದನು. ಅವನು ದಿನಾಲು ತನ್ನ ಗ್ರಾಮದಲ್ಲಿದ್ದ ಶಿವಾಲಯಕ್ಕೆ ಹೋಗಿ ಬಹು ಭಕ್ತಿಯಿಂದ ಕಿನ್ನರಿಯನ್ನು ನುಡಿಸುತ್ತ ಪರಮಾತ್ಮನನ್ನು ಭಜಿಸುವನು. ಇದಕ್ಕೋಸ್ಕರ ಪರಮಾತ್ಮನು ಅವನಿಗೆ ೧೧ ಹಣ ದ್ರವ್ಯವನ್ನು ದಿನಾಲು ಕಾಣಿಕೆಯಾಗಿ ಕೊಡುತ್ತಿದ್ದನು. ಮುಂದೆ ಅವನು ಬಸವೇಶ್ವರನ ಸಮೀಪದಲ್ಲಿರಬೇಕೆಂದು ಬಯಸಿ ಕಲ್ಯಾಣಕ್ಕೆ ಬಂದು ತ್ರಿಪುರಾಂತಕೇಶ್ವರನ ದೇವಾಲಯದಲ್ಲಿ ಕಿನ್ನರಿಯನ್ನು ಬಾರಿ

ಅವನು ಯಾಕಾಗವೊಲ್ಲದು ಎಂದು ನುಡಿದು ಅದನ್ನು ಬಿಚ್ಚಿ ತೋರಿಸಲು ಅದರಲ್ಲಿ ಲಿಂಗಗಳೇ ಇದ್ದವು. ಮಾತಂಗತಮ್ಮನು ಇವೇನೆಂದು ಅವನಿಗೆ ಕೇಳಲಾಗಿ ಸುಜ್ಞಾನಿದೇವನು ಅವುಗಳನ್ನು ಧರಿಸಿದರೆ ಅವು ಬೇಡಿದ ವಸ್ತುಗಳನ್ನು ಕೊಡುವವೆಂದು ಹೇಳಿದನು. ಹಾಗಾದರೆ ಅವುಗಳಲ್ಲಿ ಒಂದನ್ನು ನನಗೆ ಕೊಡು ಎಂದು ಬೇಡನು ಕೇಳಲಾಗಿ ಸುಜ್ಞಾನಿದೇವನು ಇವುಗಳನ್ನು ನೀನು ಗುರುವಿನಿಂದ ತೆಗೆದುಕೊಳ್ಳಬೇಕು ಎಂದು ಹೇಳಲು ಆ ಬೇಡನು ಆ ಗುರುವು ಎಲ್ಲಿದ್ದಾನೆ ಎಂದು ಕೇಳಲಾಗಿ ಆ ಗುರುವು ಈಗ ನಿನ್ನೆದುರಿಗಿದ್ದ ನಾನೇ, ಎಂದು ಹೇಳಲು, ಹಾಗಾದರೆ ನನಗೆ ಉಪದೇಶ ಮಾಡು ಎಂದು ಸುಜ್ಞಾನಿದೇವನಿಗೆ ಹೇಳಿದನು. ಆಗ ಸುಜ್ಞಾನಿದೇವನು ದೀಕ್ಷೆ ತೆಗೆದುಕೊಳ್ಳುವವರು ಮೊದಲು ಸದಾಚಾರಿಗಳಾಗಿರಬೇಕು. ಹಿಂಸೆಯನ್ನು ಎಷ್ಟು ಮಾತ್ರವೂ ಮಾಡಬಾರದು. ಆದರೆ ನೀನು ದಿನಾಲು ಮಾಂಸವನ್ನು ತಿನ್ನುತ್ತೀ; ಇದನ್ನು ನೀನು ಬಿಡಬೇಕು. ನೀನು ಪರಮಾರ್ಥದ ವಿಚಾರದಲ್ಲಿರಬೇಕು, ಎಂದು ಹೇಳಿ ಈ ವಿಷಯಗಳನ್ನು ಕುರಿತು ಸುಜ್ಞಾನಿದೇವನು ಅವನಿಗೆ ಅನೇಕ ರೀತಿಯಿಂದ ತಿಳಿಸಿ ಹೇಳಿದನು. ಮುಂದೆ ಆ ಬೇಡನು ತಾನು ಹಾಗೆ ನಡೆಯುವೆನೆಂದು ವಚನ ಕೊಡಲಾಗಿ ಅವನಿಗೆ ಸುಜ್ಞಾನಿದೇವನು ದೀಕ್ಷೆಯನ್ನು ಕೊಟ್ಟು ಮಾತಂಗತಮ್ಮನೆಂಬ ಹೆಸರಿನ ಬದಲು 'ನನ್ನಯ್ಯ' ನೆಂಬ ಹೆಸರನ್ನು ಇಟ್ಟುಕೊಳ್ಳಬೇಕೆಂದು ಬೋಧಿಸಿದನು. ಮುಂದೆ ಆ ಉಭಯತರು ಕೂಡಿಕೊಂಡು ಕಲ್ಯಾಣಕ್ಕೆ ಬಂದು ಬಸವೇಶ್ವರನನ್ನು ಕಂಡು ಕಲ್ಯಾಣದಲ್ಲಿಯೇ ವಾಸಿಸುವವರಾದರು. ಈ ನನ್ನಯ್ಯನ ಚರಿತ್ರೆಯು ಬಸವ ಪುರಾಣ ಮಾತ್ರವಲ್ಲದೆ ಸಾಂಗತ್ಯ ರೂಪವಾಗಿ ವೀರಶೈವ ಕವಿಗಳಿಂದ ವಿಸ್ತಾರವಾಗಿ ನಿರೂಪಿಸಲ್ಪಟ್ಟಿದೆ. ಅದಕ್ಕೆ 'ನನ್ನಯ್ಯನ ಸಾಂಗತ್ಯ' ಎಂಬ ಹೆಸರಿದೆ. ಈ ಚರಿತೆಯ ಮುಖ್ಯ ಉದ್ದೇಶವು ಅಹಿಂಸಾ ಧರ್ಮವನ್ನು ಪ್ರತಿಪಾದಿಸುವದೇ ಇರುತ್ತದೆ.

## ಬಡಿಹೋರಿ ಬ್ರಹ್ಮಯ್ಯ.

ಈ ಬ್ರಹ್ಮಯ್ಯನು ಶಿವಶರಣರಲ್ಲಿ ಬಹು ಪ್ರಸಿದ್ಧನಾಗಿದ್ದು ಅವನ ಅಹಿಂಸಾಚಾರದ ವರ್ತನೆಯು ಶ್ರೇಷ್ಠತರದ್ದಾಗಿರುತ್ತದೆ. ಅವನು ಒಕ್ಕಲುತನವನ್ನು ಮಾಡುತ್ತ ತನ್ನ ಉದರನಿರ್ವಾಹವನ್ನು ಸಾಗಿಸುತ್ತಿದ್ದನು. ಹೀಗಿರುವಲ್ಲಿ ಬಿತ್ತುವ ದಿನ ಬರಲು ಅವನು ಬಿತ್ತುವದನ್ನು ಪ್ರಾರಂಭ ಮಾಡುವಷ್ಟರಲ್ಲಿ ಅವನ ಎರಡು ಹೋರಿಗಳಲ್ಲಿ ಒಂದು ಹೋರಿಯು ಸತ್ತಿತು. ಆಗ ಅವನು



ಇನ್ನೊಬ್ಬ ಒಕ್ಕಲಿಗನಿಂದ ಒಂದು ಹೋರಿಯನ್ನು ಮುಯ್ಯಿಗೆ ತೆಗೆದುಕೊಂಡು ಬಿತ್ತುವದನ್ನು ಪ್ರಾರಂಭಿಸಿದನು. ಈ ಹೋರಿಯು ಹೊಸದು ಇದ್ದದರಿಂದ ಅದು ಚಂಡಿತನಕ್ಕೆ ಬೀಳಲು ಬ್ರಹ್ಮಯ್ಯನು ಅದನ್ನು ಒಳಿತಾಗಿ ಹೊಡೆದನು. ಆಗ ಅವನ ಒಂದು ಹೊಡೆತವು ಆ ಹೋರಿಯ ಆಯಸ್ಥಾನಕ್ಕೆ ಬೀಳಲು ಅದು ಸತ್ತುಹೋಯಿತು. ಇದರಿಂದ ಬಿತ್ತಿಗೆಯ ಕೆಲಸವು ಕಟ್ಟಾಗಿ ಪುನಃ ಬಿತ್ತಬೇಕಾದರೆ ಹದ ತಪ್ಪಿದ್ದರಿಂದ ಅವನಿಗೆ ಬೆಳೆಯು ಸರಿಯಾಗಿ ಬರಲಿಲ್ಲ. ಇದರಿಂದ ಬ್ರಹ್ಮಯ್ಯನಿಗೆ ಸಾಕಷ್ಟು ಕಾಳು ಬರಲಿಲ್ಲ. ಹೀಗಾಗಿ ಅವನು ಕಷ್ಟಕ್ಕೆ ಈಡಾದನು. ಆಗ ತಾನು ಹೋರಿಯನ್ನು ಹೊಡೆದು ಕೊಂದದ್ದರಿಂದ ತನಗೆ ಹೀಗಾಯಿತೆಂದು ಅವನು ಬಹಳ ಪಶ್ಚಾತ್ತಾಪಬಟ್ಟನು. ಮತ್ತು ತನ್ನಿಂದ ಹೋರಿಯ ಪ್ರಾಣ ಹೋಯಿತೆಂದು ಕಳವಳಿಸಹತ್ತಿದನು. ಹೀಗೆ ಒಂದು ದಿವಸ ಚಿಂತಿಸುತ್ತ ಕುಳಿತಿರುವಾಗ ನಿದ್ರಾಪರವಶನಾಗಿರಲು ಪರಮೇಶ್ವರನು ಅವನ ಕನಸಿನಲ್ಲಿ ಬಂದಂತಾಗಿ ಪರಮೇಶ್ವರನು ಬ್ರಹ್ಮಯ್ಯನಿಗೆ— ಎಲೋ ಬ್ರಹ್ಮಯ್ಯನೇ, ನೀನು ಬಹಳ ಪಾಪ ಮಾಡಿರುವೆ. ನೀನು ನಿರುಪದ್ರವೀ ಪ್ರಾಣಿಯನ್ನು ಕೊಂದುಹಾಕಿದೆ. ನೀನು ಇನ್ನುಮೇಲೆ ಹೊಲದ ಕೆಲಸವನ್ನು ಬಿಟ್ಟು ಹೋರಿಯಂತೆ ಹೊಡಿಸಿಕೊಂಡು ದಾಸೋಹದಲ್ಲಿರು, ಎಂದು ಹೇಳಿದಂತಾಯಿತು. ಆಗ ಅವನಿಗೆ ಎಚ್ಚರಾಯಿತು. ಎಚ್ಚರವಾದ ಬಳಿಕ ಅವನು— ನಾನು ಮಾಡಿದ ಅಪರಾಧಕ್ಕೆ ಜನರಿಂದ ಹೊಡಿಸಿಕೊಳ್ಳುವದೇ ನನಗೆ ಯೋಗ್ಯ ಶಿಕ್ಷೆಯು. ಈ ಶಿಕ್ಷೆಯನ್ನು ನಾನು ಅನುಭವಿಸುತ್ತ ಜನರಿಂದ ಕಾಯಕ ತಂದು ದಾಸೋಹ ಕಾರ್ಯಗಳನ್ನು ನಡಿಸುತ್ತ ಹೋಗುವೆನೆಂದು ಒಂದು ವ್ರತವನ್ನು ನಿಶ್ಚಯಿಸಿಕೊಂಡನು.

ಅಂದಿನಿಂದ ಜನರಿಂದ ಹೊಡಿಸಿಕೊಳ್ಳುವದೇ ಬ್ರಹ್ಮಯ್ಯನಿಗೆ ಒಂದು ಕಾಯಕವಾಯಿತು ! ಜನರಾದರೂ ಮೊದಲು ಅವನು ಹೀಗೆ ಯಾಕೆ ಹೊಡಿಸಿಕೊಳ್ಳಬೇಕೆನ್ನುತ್ತಾನೆಂಬುದನ್ನು ತಿಳಿದವರಾಗಿ ಅವನಿಗೆ ಗುದ್ದಿ ಏನಾದರೂ ಹಣಕೊಡುವರು. ಹೀಗೆ ಬಂದ ಹಣದಿಂದ ಅವನು ತನ್ನ ಪ್ರಪಂಚವನ್ನು ಸಾಗಿಸುವನು. ಹೀಗೆ ಖರ್ಚುಮಾಡಿ ಉಳಿದದ್ದನ್ನು ಅವನು ದಾಸೋಹ ಕಾರ್ಯಕ್ಕೆ ಅಂದರೆ ಕೆಲವೊಂದು ಸತ್ಕಾರ್ಯಕ್ಕೆ ಉಪಯೋಗಿಸುವನು. ಆದರೆ ಈ ಕಾಯಕವು ಬಹಳ ದಿವಸ ನಡಿಯಲಿಲ್ಲ. ಅವನ ಈ ವ್ರತವು ಜನರ ಮನಸ್ಸಿಗೆ ಬರಲಿಲ್ಲ. ಅವರು ಈ ಬ್ರಹ್ಮಯ್ಯನು ನಮಗೇನು ಮಾಡಿದ್ದಾನೆ ? ಅವನನ್ನು ನಾವೇಕೆ ಗುದ್ದಬೇಕು? ಅವನು ತನಗೆ ಉಳಿದದ್ದನ್ನು ದಾಸೋಹಕ್ಕೆ

ಉಪಯೋಗಿಸುತ್ತಾನೆ. ಅಂದರೆ ಅವನು ಪುಣ್ಯಕಾರ್ಯಕ್ಕೆ ಉಪಯೋಗಿಸುತ್ತಾನೆ. ಇಂಥವನನ್ನು ನಾವು ಹೊಡೆದರೆ ನಮಗೆ ಪಾಪ ಬರುವದು, ಎಂದು ಅವನನ್ನು ಹೊಡೆಯುವದನ್ನು ಬಿಟ್ಟರು. ಮತ್ತು ಅವರು ಅವನಿಗೆ– ಬೇಕಾದರೆ ಹಾಗೆಯೇ ನಾವು ಕಾಯಕ (ಕೂಲಿ) ಕೊಡುತ್ತೇವೆ. ಅದನ್ನು ತೆಗೆದುಕೊಂಡು ನಿನ್ನ ಉದರ ನಿರ್ವಾಹ ಸಾಗಿಸು, ಎಂದು ಹೇಳಹತ್ತಿದರು. ಆದರೆ ಬ್ರಹ್ಮಯ್ಯನು ನನ್ನ ಅಪರಾಧಕ್ಕೋಸ್ಕರ ನಾನು ಹೊಡಿಸಿಕೊಳ್ಳುವದೇ ನನ್ನ ಕಾಯಕವಾಗಿದೆ. ನೀವು ಹೊಡೆಯದಿದ್ದರೆ ನಿಮ್ಮಿಂದ ನಾನೇನೂ ತೆಗೆದುಕೊಳ್ಳುವದಿಲ್ಲ, ಎಂದು ಹೇಳಿ ಹೊರಟು ಹೋಗಿ ಬಿಡುವನು. ಇದರಿಂದ ಅವನು ಅನ್ನೋದಕಗಳಿಲ್ಲದೆ ಉಪವಾಸವಿರುವ ಪ್ರಸಂಗಗಳು ಬರಹತ್ತಿದವು. ಆದರೆ ಹೀಗೆ ಉಪವಾಸವಿದ್ದುದಕ್ಕೆ ಬ್ರಹ್ಮಯ್ಯನಿಗೆ ದುಃಖವಾಗಲಿಲ್ಲ. ಆದರೆ ಹೊಡಿಸಿಕೊಳ್ಳುವದು ನಿಂತಿತಲ್ಲಾ ಎಂದು ಅವನು ಬಹಳ ದುಃಖಿಸಹತ್ತಿದನು.

ಒಂದು ದಿವಸ ಅವನು ದುಃಖಿಸುತ್ತ ಕುಳಿತಾಗ ಅವನಿಗೆ ನಿದ್ರೆಯು ಬಂದಿತು. ಆಗ ಕನಸಿನಲ್ಲಿ ಪರಮಾತ್ಮನು ಅವನಿಗೆ— ಜನರು ತಮ್ಮ ಕಾಳುಗಳನ್ನು ಅಂಗಳದಲ್ಲಿ ಒಣಹಾಕುತ್ತಾರೆ. ಅವುಗಳನ್ನು ನೀನು ದೋಚಿಕೊಂಡು ಹೋದರೆ ಜನರು ನಿನ್ನನ್ನು ಹೊಡೆಯುತ್ತಾರೆ. ಹಾಗೆ ಮಾಡೆಂದು ಹೇಳಿದಂತಾಯಿತು. ಅವನಿಗೆ ನಿದ್ರೆಯು ತಿಳಿದ ಬಳಿಕ ಹೀಗೆಯೇ ಮಾಡಿ ನೋಡಬೇಕೆಂದು ಊರೊಳಗೆ ಹೊರಟನು.

ಅವನು ಬೀದಿಯಲ್ಲಿ ಬರುತ್ತಾ ಇರುವಾಗ ಜನರು ಅಂಗಳದಲ್ಲಿ ಒಣಹಾಕಿದ ಕಾಳುಗಳನ್ನು ಕಂಡು ಅವುಗಳನ್ನು ಎತ್ತಿಕೊಳ್ಳಹತ್ತಿದನು. ಆಗ ಜನರು ಇದನ್ನು ಕಂಡು ಇವನು ತುಡುಗನೆಂದು ತಿಳಿದು ಇವನನ್ನು ಹೊಡೆದರು. ಆದರೆ ಹೊಡೆದ ಕೂಡಲೇ ಬ್ರಹ್ಮಯ್ಯನು ಕಾಳುಗಳನ್ನು ಅಲ್ಲಿಯೇ ಚಲ್ಲಿಕೊಟ್ಟು ನನ್ನ ಕಾಯಕ ಕೊಡಿರೆಂದು ಕೇಳುವನು. ಜನರು ಅವನು ಹೀಗೇಕೆ ಬೇಡುತ್ತಾನೆ ಎಂಬುದನ್ನು ಕೇಳಿ ಅವನು ಬೇಡುವ ಕಾರಣವನ್ನು ತಿಳಿದವರಾಗಿ ಅವನನ್ನು ಗುದ್ದಿ ಕೆಲವು ದಿವಸಗಳನ್ನು ಕೊಟ್ಟು ಕಳಿಸುವರು. ಹೀಗೆ ದೊರಕಿದ್ದರ ಮೇಲೆ ಅವನು ಉಪಜೀವಿಸುತ್ತ ಕೆಲವು ಕಾಲ ತನ್ನ ದಾಸೋಹ ಕಾರ್ಯಗಳನ್ನು ನಡಿಸುವನು.

ಆದರೆ ಈ ಯುಕ್ತಿಯೂ ಕೂಡ ಬಹಳ ದಿವಸ ನಡಿಯಲಿಲ್ಲ. ಜನರು ಇವನು ಕಳ್ಳನಲ್ಲ, ಇವನು ತನಗೆ ಬಂದುದನ್ನು ಪುಣ್ಯ ಕಾರ್ಯಕ್ಕೆ ಉಪಯೋಗಿಸುತ್ತಾನೆ, ಇವನನ್ನು ಯಾಕೆ ಗುದ್ದಬೇಕು ಎಂದು ವಿಚಾರ ಮಾಡಿ ಅವನು



ಧಾನ್ಯವನ್ನು ತೆಗೆದುಕೊಂಡರೂ ಅವನನ್ನು ಹೊಡೆಯದೇ ಇದ್ದು ಅವನಿಗೆ ಭಿಕ್ಷೆ ಕೊಡಹೋಗುವರು. ಬ್ರಹ್ಮಯ್ಯನು ನನಗೆ ಹೊಡೆಯದೆ ಸುಮ್ಮನೆ ಹೀಗೆ ಭಿಕ್ಷೆಕೊಡಬೇಡಿರಿ. ಮೊದಲು ನನ್ನನ್ನು ಗುದ್ದಿರಿ. ಆ ಮೇಲೆ ಕಾಯಕವೆಂದು ನನಗೆ ಕೊಡಿರಿ ಎಂದು ಹೇಳುವನು. ಕೆಲವರು ಅವನು ಹೇಳಿದಂತೆ ಮಾಡುವರು. ಆದರೆ ಬಹಳ ಜನರು ಅವನಿಗೆ ಹೊಡೆಯದೆ ಧಾನ್ಯ ಕೊಡುವರು. ಆದರೆ ಆ ಧಾನ್ಯವನ್ನು ಅವನು ಸ್ವೀಕರಿಸದೆ ಅದನ್ನು ಅಲ್ಲಿಯೇ ಚೆಲ್ಲಿಬಿಡುವನು. ಮತ್ತು ಅವರು ಹಣ ಕೊಡಲಿಕ್ಕೆ ಬಂದರೂ ಅದನ್ನು ಸ್ವೀಕರಿಸುತ್ತಿದ್ದಿಲ್ಲ. ಇದರಿಂದ ಅವನು ಪುನಃ ಉಪವಾಸಬೀಳಹತ್ತಿದನು. ಒಂದು ದಿವಸ ಒಬ್ಬ ಭಕ್ತನು ತನ್ನ ಅಂಗಣದಲ್ಲಿ ಕಾಳನ್ನು ಒಣಹಾಕಿರಲು ಅದನ್ನು ಬ್ರಹ್ಮಯ್ಯನು ದೋಚಿಕೊಳ್ಳಲು ಆ ಭಕ್ತನು ಸುಮ್ಮನಿದ್ದು—ಅದನ್ನು ನೀನು ತೆಗೆದುಕೊಂಡು ಹೋಗು ಎಂದು ಹೇಳಿದನು. ಆದರೆ ಬ್ರಹ್ಮಯ್ಯನು ನೀನು ನನ್ನನ್ನು ಗುದ್ದಿದಲ್ಲದೆ ಕಾಳನ್ನು ತೆಗೆದುಕೊಳ್ಳಲಾರೆನು" ಎಂದು ಹೇಳಿ ಅಲ್ಲಿಯೇ ಚಲ್ಲಿಕೊಟ್ಟು ಅದೇ ಸ್ಥಳದಲ್ಲಿ ನಿಂತುಕೊಂಡುಬಿಟ್ಟನು. ಆದರೆ ಅಷ್ಟರಲ್ಲಿ ಅವನು ಅನೇಕ ದಿವಸಗಳ ವರೆಗೆ ಉಪವಾಸವಿದ್ದ ಮೂಲಕ ಬಹಳ ನಿರ್ವಿಣ್ಣನಾಗಿ ಅವನು ಅಲ್ಲಿಯೇ ಮೂರ್ಛೆ ಹೋಗಿ ನೆಲಕ್ಕೆ ಬಿದ್ದನು.

ಆಗ ಆ ಭಕ್ತನು ಹೆದರಿ ಬ್ರಹ್ಮಯ್ಯನ ಮನೆಗೆ ಓಡಿ ಹೋಗಿ ಆದ ಸಂಗತಿಯನ್ನು ಅವನ ಹೆಂಡತಿಗೆ ಹೇಳಲಾಗಿ ಅವಳು ಬ್ರಹ್ಮಯ್ಯನಲ್ಲಿಗೆ ಬಂದು ಆ ಭಕ್ತನಿಗೆ— ನೀನು ಬ್ರಹ್ಮಯ್ಯನ ಬೆನ್ನ ಮೇಲೆ ಗುದ್ದು ಎಂದು ಹೇಳಿ ಬ್ರಹ್ಮಯ್ಯನಿಗೆ, ಇಗೋ ಬ್ರಹ್ಮಯ್ಯನೇ ಈ ಭಕ್ತನು ನಿನ್ನನ್ನು ಗುದ್ದುತ್ತಾನೆ, ಏಳೇಳು, ಎಂದು ಅನ್ನುತ್ತಿರಲು ಆ ಭಕ್ತನು ಅವನ ದೇಹವನ್ನು ಗುದ್ದಲಾಗಿ ಬ್ರಹ್ಮಯ್ಯನಿಗೆ ಎಚ್ಚರವಾಗಿ ಅವನು ಎದ್ದು ಕುಳಿತನು.

ಬ್ರಹ್ಮಯ್ಯನ ಈ ವಿಶಿಷ್ಟತರದ ಕಾಯಕವು ಗ್ರಾಮದ ಜನರಿಗೆಲ್ಲ ತಿಳಿಯಿತು. ಆಗ ಅವರು ಬ್ರಹ್ಮಯ್ಯನು ಸಾಮಾನ್ಯ ಮನುಷ್ಯನಲ್ಲ, ಅವನು ಅಲೌಕಿಕಮನುಷ್ಯನು, ಶಿವಶರಣನು, ಮಹಾನುಭಾವಿಯು, ಅಹಿಂಸಾ ಧರ್ಮವನ್ನು ಪರಿಪಾಲಿಸುವವನು, ಎಂದು ತಿಳಿದವರಾಗಿ ಅವನ ಕಾಯಕದಲ್ಲಿ ಅವನಿಗೆ ಎಲ್ಲರೂ ಸಹಕರಿಸಹತ್ತಿದರು. ಇದರಿಂದ ಅವನು "ಬಡಿಹೋರಿ ಬ್ರಹ್ಮಯ್ಯ" ಎಂಬ ಹೆಸರಿನಿಂದ ಶಿವಶರಣರಲ್ಲಿ ಪ್ರಸಿದ್ಧನಾದನು. ಇದರಿಂದ ಜೀವಹಿಂಸೆ ಮಾಡಬಾರದೆಂಬ ತಿಳಿವಳಿಕೆಯ ನಾಡಿನಲ್ಲೆಲ್ಲ ಭರದಿಂದ ಪ್ರಸಾರವಾಗಹತ್ತಿತು.

## ಹಲಾಯುಧ.

ಬರ್ಬರ ದೇಶದಲ್ಲಿ ನವಪುರವೆಂಬ ಪಟ್ಟಣವಿದ್ದಿತು. ಅಲ್ಲಿ ಹಲಾಯುಧನು ಶಿವಧರ್ಮನಿರತನೆಂದು ಪ್ರಸಿದ್ಧನಾಗಿದ್ದನು. ಈ ಪಟ್ಟಣದಲ್ಲಿ ಒಂಬತ್ತು ಉಪಗ್ರಾಮಗಳಿದ್ದು, ಆ ಗ್ರಾಮಗಳ ಒಡೆಯರು ಸಹ ಶಿವಭಕ್ತಿಯುಳ್ಳವರಾಗಿ ಆಚರಿಸುತ್ತಿದ್ದರು. ಬರ್ಬರದೇಶವು ಅಫಗಾಣಿಸ್ತಾನವೆಂದು ತಿಳಿಯಲ್ಪಟ್ಟಿದೆ.

ಹೀಗಿರುವಲ್ಲಿ ಸಿರಿಯಾಳನು ಕೈಲಾಸಕ್ಕೆ ಹೋದಬಳಿಕ ಅವನು ತಾನು ಕಾಂಚೀಪುರದಲ್ಲಿ ತನ್ನ ಸುತನನ್ನು ಹತಿಸಿ ಶಿವನಿಗಿಕ್ಕಿ ಕೈಲಾಸಕ್ಕೆ ಬಂದಿದ್ದೇನೆ, ನನ್ನಂಥವರು ಶಿವನೊಡ್ಡೋಲಗದಲ್ಲಿ ಯಾರೂ ಇಲ್ಲ, ಎಂದು ಎಲ್ಲರ ಕೂಡ ಅತ್ಯಂತ ಅಹಂಕಾರದಿಂದ ವರ್ತಿಸಹತ್ತಿದನು. ಇದು ಶಿವನ ಲಕ್ಷಕ್ಕೆ ಬಂದು, ಅಹಂವೆಂಬುದು ಕರ್ಮಕ್ಕೆ ಮೊದಲು, ಅದು ಭವಕ್ಕೆ ಬೀಜವು, ಇದನ್ನು ಸಿರಿಯಾಳನು ಅರಿಯನು, ಇದನ್ನು ಹೇಗೆ ದೂರಮಾಡಬೇಕೆಂಬುದನ್ನು ಚಿಂತಿಸುತ್ತ ಇದನ್ನು ಭಕ್ತರಿಂದಲೇ ದೂರಮಾಡಿಸಬೇಕೆಂದು ಯೋಚಿಸಿ ಒಂದು ಉಪಾಯವನ್ನು ನೆನೆದು ಭೂತಳಕ್ಕೆ ತನ್ನೊಡನೆ ಬರಬೇಕೆಂದು ಶಿರಿಯಾಳನಿಗೆ ಅವನು ಹೇಳಿದನು. ಆಗ ಉಭಯತರು ಮಾಹೇಶ್ವರರ ವೇಷವನ್ನು ಧರಿಸಿಕೊಂಡು ನಾಡಿನಲ್ಲಿ ಶಿವಭಕ್ತರಿದ್ದ ಸ್ಥಾನಗಳನ್ನು ನೋಡಲಿಕ್ಕೆ ಹೊರಟರು.

ಅವರು ಮೊದಲು ನಂಬಿಯಕ್ಕನಿದ್ದ ಸ್ಥಾನಕ್ಕೆ ಹೋದರು. ಅವಳು ತನ್ನ ಮಗನನ್ನು ಹೇಗೆ ಶಿವನಿಗರ್ಪಿಸಿದಳೆಂಬುದನ್ನು ಶಿವನು ಸಿರಿಯಾಳನಿಗೆ ತಿಳಿಸಿ ಕೊಟ್ಟನು. ಶಿರಿಯಾಳನು ಅದನ್ನು ಕೇಳಿ ಅಚ್ಚರಿಬಟ್ಟನು. ಹಾಗೆಯೇ ಶಿವನು ಚಾರಮರಾಯ, ಶ್ವಪಚಯ್ಯ, ಬಾಹೂರು ಬೊಮ್ಮಯ್ಯ, ದೇವರ ದಾಸಿಮಯ್ಯ ಇವರಿದ್ದ ನಗರಗಳನ್ನು ತೋರಿಸಿ ಅವರು ಮಾಡಿದ ಮಹತ್ತರ ಕಾರ್ಯಗಳನ್ನು ನಿವೇದಿಸಿದನು. ಕಡೆಗೆ ಉಭಯತರು ಹಲಾಯುಧನಿದ್ದ ನವಪುರಕ್ಕೆ ಬಂದು ಅವನಿಗೆ ಭೆಟ್ಟಿಯಾದರು. ಹಲಾಯುಧನು ಅವರಿಗೆ—ನೀವಾರು, ನಿವೇಲ್ಲಿಂದ ಬಂದಿರೆಂದು ಕೇಳಲು, ಅವರು– ನಾವು ಇದ್ದುದು ನಿರಾಳಪುರ, ಮೇದಿನಿಯಲ್ಲಿದ್ದ ಶಿವಶರಣರ ಸ್ಥಾನಗಳನ್ನು ನೋಡುತ್ತ ಈ ದೂರ ದೇಶಕ್ಕೆ ಬಂದಿದ್ದೇವೆ ಎಂದು ಹೇಳಿ ಅಮ್ಮವ್ವೆಯು ತಾಯಿಯೋಪಾದಿಯಲ್ಲಿ ಶಿವನಿಗೆ ಹಾಲನೆರೆದಳು, ಪರಮಾತ್ಮನು ಚನ್ನಯ್ಯನೊಡನುಂಡನು, ದಾಸಿಮಯ್ಯನು ೧೨ ವರ್ಷ ನೆಯ್ದ ಬಟ್ಟೆಯನ್ನು ಜಂಗಮನಿಗೆ ಉಡಕೊಟ್ಟನು,



ಹೀಗೆ ಶಿವಶರಣರ ಚರಿತ್ರೆಗಳನ್ನು ಹೇಳುತ್ತ ನಾವು ಮೊನ್ನೆ ಕಂಚಿಗೆ ಹೋದಾಗ ಅಲ್ಲಿ ಶಿರಿಯಾಳನು ತನ್ನ ಮಗನನ್ನು ವಧಿಸಿ ಶಿವನಿಗಿಕ್ಕಿ ಕಾಂಚೀಪುರಸಹಿತ ಕೈಲಾಸಕ್ಕೆ ಒಯ್ದನು. ಬರಿಯ ಮಾತನಾಡಬಹುದು. ಹೀಗೆ ಕೊಡುವದು ಅರಿದು ಎಂದು ಅವರು ನುಡಿದರು.

ಹಲಾಯುಧನು ಸಿರಿಯಾಳನ ಈ ಚರಿತ್ರೆಯನ್ನು ಕೇಳಿದ ಕೂಡಲೆ ತನ್ನ ಕಿವಿಯನ್ನು ಮುಚ್ಚಿ 'ಶಾಂತಂ ಪಾಪಂ, ಶಾಂತಂ ಪಾಪಂ' ಎಂದು ಅನ್ನುತ್ತ ಏನು ಶಿವ ಮನುಜರನ್ನು ಭಕ್ಷಿಸಲು ರಾಕ್ಷಸನಾದನೇ? ಸಿರಿಯಾಳನು ಹಸುಳನ್ನು ವಧಿಸಿದನೇ? ಮಗನನ್ನು ಕೊಲ್ಲುವವನು ಎಂತಹ ಸಿರಿಯಾಳ? ಇಂಥ ಭಕ್ತಿ ಹೀನದ ಮಾತು ನೀವೇಕೆ ನನಗೆ ಹೇಳುವಿರಿ? ಶಿವನು ಭಕ್ತರನ್ನು ಹೀಗೆ ವಧಿಸಿ ಭಕ್ತದ್ವೇಷಿಯಾದನೇ ? ಏತಕೀಮಾತು? ಶಿವಭಕ್ತರು ಮಾಂಸವನ್ನು ಮುಟ್ಟಬಾರದು. ಅದನ್ನು ನೋಡಲು ಸಹ ಬಾರದು ಎಂದು ಸಿಟ್ಟಿನಿಂದ ಅಬ್ಬರಿಸಿದನು.

ಅದಕ್ಕೆ ಮಹೇಶ್ವರ ವೇಷದಲ್ಲಿದ್ದ ಶಿವನು ಜಗತ್ತಿನಲ್ಲಿ ಅನೇಕ ಪುರಾತನರು ಆಗಿಹೋಗಿದ್ದಾರೆ. ಅವರಲ್ಲಿ ಅನೇಕರು ತಮ್ಮ ಮಹಿಳೆಯರನ್ನು ಮಕ್ಕಳನ್ನು ಮತ್ತು ತಮ್ಮನ್ನು ಪರಮಾತ್ಮನಿಗೆ ಅರ್ಪಿಸಿದ್ದಾರೆ. ಹಲಾಯುಧನೇ ನೀನಂದ ಮಾತು ಸಲ್ಲದು? ನಿರ್ಮಳ ಮನದ ಸಿರಿಯಾಳನನ್ನು ಭೂವಲಯದಲ್ಲಿ ಜನರೆಲ್ಲರು ನಾನಾ ಬಗೆಯಾಗಿ ಸ್ತುತಿಸುತ್ತಾರೆ. ಸಭಾ ಕಾಲದಲ್ಲಿ ಅವನ ಚರಿತೆಯನ್ನು ಕೇಳಿ ಆನಂದಿಸುತ್ತಾರೆ, ಎಂದು ಉತ್ತರಕೊಟ್ಟನು.

ಈ ನುಡಿಗಳನ್ನು ಕೇಳಿ ಹಲಾಯುಧನ ಕೋಪವು ಮತ್ತಿಷ್ಟು ಹೆಚ್ಚಿತು. ಅವನು ಅಬ್ಬರಿಸುತ್ತ—ಅಹುದಹುದು ಉಮಾಪತಿಯು ಮಾಂಸವನ್ನು ಬೇಡಿದನೇ? ಅವನು ಭಕ್ತವತ್ಸಲನೇ ? ಅವನು ಭಕ್ತನಾದರೆ ತರಳನನ್ನು ಹೇಗೆ ಕೊಲ್ಲಿಸಿದನು? ಅವನ ಹೆಂಡತಿಯು ರಕ್ಕಸಿಯಾದಳೇ? ಶಿವನು ತರಳನನ್ನು ಕಾಮಿಸಿ ಹೇಗೆ ಅವನನ್ನು ಕೊಲ್ಲಿಸಿದನು? ಇದು ಭಕ್ತಾಚಾರವೇ ? ನರಮಾಂಸವು ಮಲಹರನ ಗಂಟಲಲ್ಲಿ ಹೇಕೆ ಇಳಿಯಿತು ? ಇದು ನಿರ್ಮಳದ ಕಥೆ ಎಂದು ನೀವು ನನಗೆ ಹೇಳುತ್ತೀರಿ. ಇದು ಪಾಪದ ಕಥೆಯು. ನೀವು ಪಾಪಿಷ್ಠರು. ನೀವು ಈ ಜಗತ್ತಿನಲ್ಲಿ ಇರಬಾರದು ಎಂದು ಅಬ್ಬರಿಸುತ್ತ ನುಡಿದನು.

ಆಗ ಉಭಯ ಮಾಹೇಶ್ವರರು ಹಲಾಯುಧನ ರೋಷವನ್ನು ನೋಡಿ ಭಯಗೊಂಡರು. ಅವರಿಗೆ ಪ್ರಾಣಭಯವಾಯಿತು. ಅವರ ಎದೆಯು ಡವಡವನೆ ಹಾರುತ್ತಿತ್ತು. ಶಿವನು ಭಯದಿಂದ ವಿಹ್ವಲನಾದನು. ಆಗ ಉಭ

ಯತರಿಗೆ ತಮ್ಮ ಕಾಂತೆಯರ ನೆನಪಾಗಿ ತಮ್ಮನ್ನು ಉಳಿಸಿಕೊಳ್ಳಬೇಕೆಂದು ಅವರನ್ನು ನೆನೆಯಲಾಗಿ, ಜಂಗಳಿ ಪಾರ್ವತೀದೇವಿಯರು ಹಲಾಯುಧನಿದ್ದಲ್ಲಿಗೆ ಓಡಿ ಬಂದರು. ಅವರು ನಡೆದ ಸಂಗತಿಗಳನ್ನು ತಿಳಿದುಕೊಂಡು ಪಾರ್ವತೀದೇವಿಯು ಹಲಾಯುಧನಿಗೆ— ನೀನು ನಮಗೆ ಆಶೀರ್ವಾದವನ್ನು ಮಾಡು. ನಮ್ಮ ಆಶೆಯನ್ನು ಪೂರೈಸು. ಈಕೆ ಸಿರಿಯಾಳನ ಸತಿಯು. ನಾನು ಜಂಗಳಿಯು, ಜಗದೀಶನ ರಾಣಿ. ನಾವು ಪತಿಬಾಹ್ಯರಾಗುವಂತೆ ಮಾಡಬೇಡ. ನೀವು ನಮ್ಮ ಪತಿಗಳನ್ನು ನಮಗೆ ಭಿಕ್ಷೆಯಾಗಿ ಕೊಡಬೇಕು ಎಂದು ಅವನಿಗೆ ಬೇಡಿಕೊಂಡರು. ಆಗ ಹಲಾಯುಧನ ರೋಷವು ಅಡಗಿತು. ಅವರಿಗೆ– ನೀವು ಅಂಜಬೇಡಿರಿ, ಅಂಜಬೇಡಿರಿ, ಎಂದು ಅಭಯವನ್ನು ಕೊಟ್ಟನು. ಆದರೆ ನಿಮ್ಮ ಪತಿಗಳು ಇಂಥ ಹಿಂಸಾಚಾರವನ್ನು ಬಿಡಬೇಕು. ಹೀಗೆ ಮಾಡುವದು ಅಧರ್ಮವು, ಎಂದು ನುಡಿದನು. ಆಗ ಶಿವನು, ಹಲಾಯುಧನ ಅಹಿಂಸಾ ಮಾರ್ಗಕ್ಕೆ ಪ್ರೀತನಾಗಿ, ಅವನಿಗೆ ನಿಜರೂಪವನ್ನು ತೋರಿಸಿದನು. ಹಲಾಯುಧನು ಶಿವನ ರೂಪವನ್ನು ನೋಡಿ ಶಿವನನ್ನು ಹೊಗಳುವಲ್ಲಿ- ಶಿವನ ಅಗ್ನಿನೇತ್ರವು ಜ್ವಾಲೆಯಿಂದ ಪೂರಿತವಾದದ್ದೆಂದು ಹೇಳದೆ ಅದು ಕುಂಕುಮದ ಲಲಾಮವೆಂದು ಹೇಳಿದನು. ಶಿವನ ಕಂಠದಲ್ಲಿ ಇದ್ದ ಕಪ್ಪನ್ನು ವಿಷವೆಂದು ಹೇಳದೆ ಅದು ಕಸ್ತುರಿಯ ರೇಖೆ ಎಂದು ಹೇಳಿದನು. ಹಲಾಯುಧನು ಹೀಗೆ ಶಿವನನ್ನು ಮೃದುವಚನಗಳಿಂದ ಹೊಗಳುತ್ತ- ಶಂಕರನೇ, ಶುಭಕರನೇ, ವರದ ಅಭಯಕರನೇ, ನೀನೊಲಿದರೆ ಇರುವೆ ಭಕ್ತನಾಗುವದು, ನೊರಜು ನಾರಾಯಣನಾಗುವದು. ಭಕ್ತರ ವಾಮಕ್ಷೇಮ ನಿನ್ನದು. ಕರ್ತುವೇ. ಭಕ್ತರ ಸಿಧಿಸಿಧಾನವೇ ಎಂದು ತನ್ನ ಶುದ್ಧ ಸಾತ್ವಿಕ ಅಹಿಂಸಾಮಯವಾದ ಶಬ್ದಗಳಿಂದ ಪರಮಾತ್ಮನನ್ನು ಪ್ರಾರ್ಥಿಸಿದನು. ಆಗ ಪರಮಾತ್ಮನು ಹಲಾಯುಧನ ನೈಜವಾದ ಶುದ್ಧವಾದ ಭಕ್ತಿಗೆ ಪ್ರೀತನಾಗಿ- ನಿನಗೇನು ಬೇಕು ಬೇಡು ಎನಲು ಅವನು ತನ್ನ ನವಪುರದ ಜನರನ್ನೊಡಗೊಂಡು ನನ್ನನ್ನು ನಿನ್ನ ಶಿವಪುರಕೆ ಒಯ್ಯು ಎಂದು ಹೇಳಲು, ಶಿವನು ಅವನ ಒಂಬತ್ತು ಪುರಗಳ ಸಹಿತವಾಗಿ ಅವನನ್ನು ಕೈಲಾಸಕ್ಕೊಯ್ದನು. ಆಗ ಅವನೊಡನೆ ಸಿರಿಯಾಳನೂ ಜಂಗಳಿಯೂ ಇರಲು ಶಿವನು ಸಿರಿಯಾಳನಿಗೆ— ನೋಡಿದೆಯಾ ಭಕ್ತರ ಮಹಾತ್ಮೆಯನ್ನು ? ಮಗನನ್ನರ್ಪಿಸಿದೆನೆಂದು ನೀನು ಹೆಮ್ಮೆಯನ್ನು ತಾಳಿದ್ದೆ. ನಿನ್ನಕಿಂತಲೂ ಹೆಚ್ಚಿನ ಭಕ್ತರು ಜಗತ್ತಿನಲ್ಲಿ ಆಗಿ ಹೋಗಿರುವದನ್ನು ನೀನು ಪ್ರತ್ಯಕ್ಷ ಭೂಲೋಕದಲ್ಲಿ ಕಂಡೆಯಾ ? ಎಂದು ನುಡಿಯಲು ಸಿರಿಯಾಳನು—



ಅಹುದಹುದು. ನನ್ನಿಂದ ಅಪರಾಧವಾಯಿತು, ಕ್ಷಮಿಸೆಂದು ಬೇಡಿಕೊಳ್ಳಲು ಪರಮಾತ್ಮನು ಅವನನ್ನು ಕರೆದುಕೊಂಡು ಕೈಲಾಸಕ್ಕೆ ಹೋದನು.

ಇದರಲ್ಲಿ ವಾಚಕರು ಅಹಿಂಸೆಯ ಪ್ರಭಾವವು ಎಷ್ಟು ಇದೆ ಎಂಬುದನ್ನು ತಿಳಿಯಬಹುದು.

ಈ ವರೆಗೆ ನಾವು ಅಹಿಂಸೆಯ ಉದಾಹರಣೆಗಳಲ್ಲಿ ಪ್ರಾಣಿಗಳನ್ನು ಕುರಿತು ಇದ್ದವುಗಳನ್ನು ಮಾತ್ರ ಹೇಳಿದೆವು. ಆದರೆ ಈ ಅಹಿಂಸೆಯು ಮನುಷ್ಯನ ಶರೀರ, ಅವನ ಮನಸ್ಸು, ಅವನ ನಡೆ, ಇವುಗಳಿಗೂ ವನಸ್ಪತಿಗಳಿಗೂ, ಪಶುಪಕ್ಷಿಗಳಿಗೂ ಕೂಡ ಸಂಬಂಧಿಸುತ್ತದೆ. ಆದ್ದರಿಂದ ಅವುಗಳ ಕೂಡ ಸಹ ಮನುಷ್ಯನು ದಯಾಯುಕ್ತನಾಗಿ ಮತ್ತು ಆದರ ಭಾವದಿಂದ ಆಚರಿಸಬೇಕೆಂದು ಶಿವಶರಣರು ಹೇಳುತ್ತಾರೆ. ವನಸ್ಪತಿ, ಪಶುಪಕ್ಷ್ಯಾದಿಗಳು ಮನುಷ್ಯನ ಹಿತಕ್ಕೆ ಮಾತ್ರ ಹುಟ್ಟಿರುತ್ತವೆಂದು ಕೆಲವು ಜನಾಂಗಗಳು ತಿಳಿದು ಅವುಗಳನ್ನು ಅವರು ಕ್ರೂರ ತನದಿಂದ ನಡಿಸಿಕೊಳ್ಳುತ್ತಾರೆ. ಆದರೆ ಹಿಂದುಗಳ ಅಭಿಪ್ರಾಯದ ಪ್ರಕಾರ ಈ ವಿಶ್ವದಲ್ಲೆಲ್ಲ ಜೀವ ಕಳೆಯು ತುಂಬಿರುತ್ತದೆ. ಆದ್ದರಿಂದ ವಿಶ್ವದಲ್ಲಿರುವ ಎಲ್ಲ ಜೀವಿಗಳೊಡನೆ ಜನರು ದಯಾರ್ದ್ರ ಭಾವದಿಂದ ವರ್ತಿಸಬೇಕೆಂದು ಶಿವಶರಣರು ನಿರೂಪಿಸುತ್ತಾರೆ.

ಎಲ್ಲಿ ಜೀವವಿದೆಯೋ ಅಲ್ಲಿ ಪರಮಾತ್ಮನೂ ಇದ್ದಾನೆಂಬುದನ್ನು ಶರಣರು ಭಾವಿಸುತ್ತಾರೆ. ಇಂಥವುಗಳಲ್ಲಿ ಪರಮಾತ್ಮನು ಪ್ರತ್ಯಕ್ಷ ಕಾಣದಿದ್ದರೂ ಅವನು ಅಲ್ಲಿ ಲಿಂಗರೂಪಾಗಿ ಪ್ರೇರಣೆ ಮಾಡುತ್ತಾನೆಂದು ಅವರ ಅಭಿಪ್ರಾಯವಿದೆ.

ವಿಶ್ವವು ಪಂಚ ಭೂತಗಳಿಂದ ಅಂದರೆ ಪೃಥ್ವಿ, ಆಪ್, ತೇಜ, ವಾಯು, ಆಕಾಶಗಳಿಂದ ಉಂಟಾದುದು ಇರುತ್ತದೆ. ಈ ತತ್ವಗಳು ವಿಶ್ವದಲ್ಲೆಲ್ಲ ಇವೆ. ಇವುಗಳಲ್ಲಿ ಲಿಂಗಗಳಿದ್ದು ಅವು ಅನುಕ್ರಮವಾಗಿ ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಲಿಂಗ, ಮಹಾಲಿಂಗ ಎಂದು ಕರೆಯಲ್ಪಡುತ್ತವೆ. ಈ ಲಿಂಗಗಳು ಅನುಕ್ರಮವಾಗಿ ಕ್ರಿಯಾಶಕ್ತಿ, ಜ್ಞಾನಶಕ್ತಿ, ಇಚ್ಛಾಶಕ್ತಿ, ಆದಿಶಕ್ತಿ, ಪರಾಶಕ್ತಿ, ಚಿತ್‌ಶಕ್ತಿ ಇವುಗಳನ್ನು ಆಧಾರವಾಗಿಟ್ಟುಕೊಂಡು ಪ್ರಕಟವಾಗುತ್ತವೆ. ಇವು ಶ್ರದ್ಧಾ ಭಕ್ತಿ, ನಿಷ್ಠಾ ಭಕ್ತಿ, ಅವಧಾನ ಭಕ್ತಿ, ಅನುಭಾವ ಭಕ್ತಿ, ಸುಜ್ಞಾನ ಭಕ್ತಿ, ಸಮರಸ ಭಕ್ತಿ ಇವುಗಳ ಮೂಲಕ ಆಯಾ ಭೂತಗಳಲ್ಲಿ ಉದ್ಭವಿಸುತ್ತವೆ.

ನಾವು ಮೇಲೆ ಹೇಳಿದ ಶಕ್ತಿಗಳೂ, ಭಕ್ತಿಗಳೂ ಉದಾತ್ತ ಸ್ವರೂಪದವಾದವು ಇದ್ದು ಇವುಗಳ ಮೂಲಕವೇ ಮನುಷ್ಯನಲ್ಲಿ ಸದ್ಗುಣಗಳು ಉಂಟಾಗುತ್ತವೆ. ಶಕ್ತಿಗಳು ಮನುಷ್ಯನನ್ನು ದುರ್ವ್ಯಾಪಾರಗಳಲ್ಲಿಯೂ ತೊಡಗಿಸಬಹುದು. ಆದರೆ ಭಕ್ತಿಗಳ ಮೂಲಕ ಅವುಗಳನ್ನು ಅಂಕಿತದಲ್ಲಿಟ್ಟುಕೊಳ್ಳಬೇಕು. ಆಗ ಅವನಲ್ಲಿ ದುಷ್ಟ ಗುಣಗಳು ಹೋಗಿ ಸದ್ಗುಣಗಳು ಪ್ರಕಟವಾಗುತ್ತವೆ. ಹೀಗೆ ಜಗತ್ತಿನಲ್ಲಿ ಸೌಜನ್ಯ ಶಕ್ತಿ ದೌರ್ಜನ್ಯ ಶಕ್ತಿ ಎಂಬ ಎರಡು ಶಕ್ತಿಗಳಿದ್ದು ಅವುಗಳಲ್ಲಿ ಯಾವಾಗಲೂ ಪರಸ್ಪರ ಹೋರಾಟಗಳು ನಡೆದಿರುತ್ತವೆ. ಆದರೆ ಮನುಷ್ಯನಾದವನು ದುಷ್ಟ ಶಕ್ತಿಗಳನ್ನು ಅಂಕಿತದಲ್ಲಿಟ್ಟುಕೊಂಡು ಯೋಗ್ಯ ಮಾರ್ಗವನ್ನು ಅನುಸರಿಸಿದಲ್ಲಿ ಅವನಲ್ಲಿ ಉಚ್ಚ ಪರಿಣಾಮಗಳು ಉಂಟಾಗುತ್ತವೆ. ಅಂದರೆ ಅವನಲ್ಲಿ ಲಿಂಗದ ಗುಣಗಳು ಉದ್ಭವಿಸುತ್ತವೆ.

ಸೃಷ್ಟಿಯಲ್ಲಿ ಸೌಂದರ್ಯವೂ ವ್ಯವಸ್ಥೆಯೂ ಇರುತ್ತವೆ. ಇವು ಮನುಷ್ಯನಲ್ಲಿಯೂ ಇವೆ. ಅವು ಹೀಗೆ ಇದ್ದಲ್ಲಿ ಲಿಂಗವಿದೆ. ಆದರೆ ಸೃಷ್ಟಿಯಲ್ಲಿ ರೌದ್ರತೆ, ಭಯೋತ್ಪಾದಕ ಸ್ಥಿತಿ, ಕ್ರೌರ್ಯ ಇವು ಸಹ ಕಾಣ ಬರುತ್ತವೆ. ಮನುಷ್ಯನಲ್ಲಿಯೂ ಅವು ಇವೆ. ಅವು ಲಿಂಗದ ಗುಣಗಳಲ್ಲ. ಇವು ಕೆಡುಕು ಗುಣಗಳು. ಇವುಗಳನ್ನು ಮನುಷ್ಯನು ದೂರ ಮಾಡತಕ್ಕದ್ದು. ಇದು ಸತ್ಸಂಗ, ಲಿಂಗ ಧ್ಯಾನ, ಭಕ್ತಿ, ನಿಯಂತ್ರಿತ ಕ್ರಿಯೆಗಳು ಇವುಗಳ ಸಹಾಯದಿಂದ ದೂರ ಮಾಡುವದು ಶಕ್ಯವಿದೆ. ಇದರಿಂದ ಮನುಷ್ಯನು ಸನ್ಮಾರ್ಗಕ್ಕೆ ಎಳೆಯಲ್ಪಟ್ಟು ಸುಖಿಯಾಗುತ್ತಾನೆ. ಇದು ಉಚ್ಚ ತರದ ವರ್ತನೆಯಾಗಿದೆ. ಇದರಿಂದ ಕಡೆಗೆ ಮನುಷ್ಯನು ಪರಮಾತ್ಮನಲ್ಲಿ ಸಾಮರಸ್ಯವನ್ನು ಹೊಂದುತ್ತಾನೆ.

ಒಟ್ಟಿಗೆ ಶಿವಶರಣರು ವಿಶ್ವದಲ್ಲಿ ಯಾವ ವಸ್ತುವೂ ಶಾಶ್ವತವಾಗಿ ಕೆಡುಕಾದದ್ದೆಂದು ಭಾವಿಸುವದಿಲ್ಲ. ಎಲ್ಲ ವಸ್ತುಗಳಲ್ಲಿ ಲಿಂಗದ ಗುಣಗಳು ಕೆಲವೊಂದು ಪ್ರಮಾಣದಿಂದ ಹುದುಗಿಕೊಂಡೇ ಇರುತ್ತವೆ. ಅವುಗಳನ್ನು ಅವನು ಹೆಚ್ಚೆಚ್ಚು ಪ್ರಕಟಮಾಡುತ್ತ ಹೋಗತಕ್ಕದ್ದು. ಇದು ಶಿವಶರಣರ ವರ್ತನೆಯು. ಈ ಬಗ್ಗೆ ವಚನಗಳೂ ಇವೆ.

ಒಬ್ಬ ವಚನಕಾರನು ಅನ್ನುವದೇನೆಂದರೆ, ಪರಮಾತ್ಮನು ಜಗತ್ತಿನಲ್ಲಿ ದಟ್ಟವಾಗಿ ವಾಸಿಸುತ್ತಾನೆ. ಜಗತ್ತು ಕೇವಲ ಮಾಯೆಯಲ್ಲ. ಕಾಯ, ಜೀವ, ಭೂಮಿ ಇವು ಯಾವಾಗಲೂ ಹೇಯವಲ್ಲ. ಅವು ಪರಮಾತ್ಮನು ತನಗೆ ಕೊಟ್ಟ ದಾನವೆಂದು ಮನುಷ್ಯನು ತಿಳಿದು ವರ್ತಿಸಬೇಕು. ಈ ವಚನಕಾರನ ಉಕ್ತಿಯು ಏನೆಂದರೆ:—



''ಕಾಯ ನಿಮ್ಮ ದಾನ, ಜೀವ ನಿಮ್ಮ ದಾನ, ಕಾಯ ಜೀವವುಳ್ಳಲ್ಲಿಯೇ ಪೂಜಿಸದ ಅನ್ಯಾಯಿಗಳನೇನೆಂಬೆ?'' ಹೀಗೆಯೇ ಅವನು ಭೂಮಿ, ಗಗನ, ಸಾಗರ, ಹೊಳೆಹಳ್ಳಗಳು ಉಪಯುಕ್ತ ವಸ್ತುಗಳಾಗಿವೆ. ಪರಮಾತ್ಮನು ಅವುಗಳಲ್ಲಿ ತಿಂಥಿಣಿಯಾಗಿ ವಾಸ ಮಾಡುತ್ತಾನೆ. ಅಂದರೆ ಲಿಂಗರೂಪಾಗಿ ಅವುಗಳಲ್ಲಿ ದಟ್ಟವಾಗಿ ವಾಸವಾಗಿರುತ್ತಾನೆ. ಈ ಸಂಗತಿಯನ್ನು ತಿಳಿದು ಜಗತ್ತಿನಲ್ಲಿಯ ವಸ್ತುಗಳು ತ್ಯಾಜ್ಯವು ಎಂದು ಭಾವಿಸಲಾಗದೆಂದು ಈ ವಚನಕಾರರ ಮುಖ್ಯ ಅಭಿಪ್ರಾಯವು.

ಈ ತತ್ವವನ್ನು ಶಿವಶರಣರು ಪಾಲಿಸುವದರಿಂದ ಅವರು ಸೃಷ್ಟಿಯಲ್ಲಿ ನಡೆದಿರುವ ವ್ಯಾಪಾರಗಳನ್ನು ನಿರೀಕ್ಷಿಸಿ ಅವುಗಳ ರೀತಿಯನ್ನು ಅನುಸರಿಸುವವರಾಗಿದ್ದಾರೆ. ಅಲ್ಲಮಪ್ರಭುವು ಒಬ್ಬ ಪ್ರಸಿದ್ಧ ವಚನಕಾರನು ಮತ್ತು ತತ್ವಜ್ಞಾನಿಯು. ಅವನು ಮನುಷ್ಯನು ಹೇಗೆ ನಡೆಯಬೇಕೆಂಬುದನ್ನು ಕುರಿತು ತನ್ನ ಒಂದು ವಚನದಲ್ಲಿ ಕೆಳಗಿನಂತೆ ಹೇಳಿದ್ದಾನೆ. ಆ ವಚನವು ಯಾವದೆಂದರೆ:—

" ಬಿರುಗಾಳಿ ಬೀಸಿ ಮರ ಮುರಿವಂತೆ ಸುಳುಹೆ ಸುಳಿಯದೆ, ತಂಗಾಳಿ ಪರಿಮಳದೊಡಗೂಡಿ ಸುಳಿವಂತೆ ಸುಳಿಯಬೇಕು. ಸುಳಿದಡೆ ನೆಟ್ಟನೆ ಜಂಗಮವಾಗಿ ಸುಳಿಯಬೇಕು. ಸುಳಿದಡೆ ನೆಟ್ಟನೆ ಭಕ್ತನಾಗಿ ನಿಲಬೇಕು "

ಎಂದು ನುಡಿದಿದ್ದಾನೆ. ಸೃಷ್ಟಿಯ ವ್ಯಾಪಾರಗಳನ್ನು ನೋಡಿ ಅವನು ಹೀಗೆ ಬಹು ಸುಂದರವಾಗಿ ನುಡಿದಿದ್ದಾನೆ.

ಇನ್ನೊಬ್ಬ ವಚನಕಾರನು ಕೆಳಗೆ ಕಾಣಿಸಿದಂತೆ ಹೇಳಿದ್ದಾನೆ. ಇದರಲ್ಲಿ ಅವನು ಮಾಂಸ ಭಕ್ಷಣ ಮಾಡದೆ ಭೂಮಿಯಲ್ಲಿ ಬೇರೆ ಪೌಷ್ಟಿಕ ಉದ್ಭಿಜ್ಜಾಹಾರಗಳಿದ್ದು ಅವುಗಳನ್ನು ಸೇವಿಸಲು ಬೋಧಿಸಿದ್ದಾನೆ. ಅದು ಯಾವದೆಂದರೆ:-

" ಅಡಗ (ಮಾಂಸ) ತಿಂಬರು ಕಣಕದಡಿಗೆ ಇರಲ್ಕೆ. ಸುರೆಯ ಕುಡಿವರು ಹಾಲಿರಲ್ಕೆ. ಮುಕ್ಕುವರು ಭಂಗಿಯ ಸಕ್ಕರೆ ಇರಲ್ಕೆ."

ಎಂದು ಹೇಳಿದ್ದಾನೆ.

ಇನ್ನೊಬ್ಬ ವಚನಕಾರಳಾದ ಮಹಾದೇವಿಯಕ್ಕನು ದೇವರು ಮಾಡಿದ ಪದಾರ್ಥಗಳಲ್ಲಿ ಅನೇಕ ಮಹತ್ವದ ಗುಣಗಳಿದ್ದು ಅವುಗಳಿಗನುಸರಿಸಿ ನಡೆಯಲು ಬೋಧಿಸುತ್ತಾಳೆ. ಅದು ಏನೆಂದರೆ:—

"ಚಂದನವ ಕಡಿದು ಕೊರಡು ತೇದಡೆ ನೊಂದೆನೆಂದು ಕಂಪ ಬಿಟ್ಟಿತ್ತೇ? ತಂದು ಸುವರ್ಣವ ಕಡಿದೊರೆದಡೆ ಬೆಂದು ಕಳಂಕ ಹಿಡಿದಿತ್ತೇ?" ಇತ್ಯಾದಿ

ಹೀಗೆ ಜಗತ್ತಿನಲ್ಲಿಯ ವಸ್ತುಗಳನ್ನು ನೋಡಿ ಯಾರಿಗೂ ಪೀಡೆಯನ್ನು ಕೊಡದೆ ಅಹಿಂಸಾ ಧರ್ಮವನ್ನು ಪಾಲಿಸಬೇಕು ಮತ್ತು ದಯಾರ್ದ್ರಭಾವವುಳ್ಳವನಾ ಗಿರಬೇಕು ಎಂದ ಶಿವಶರಣರು ಬೋಧಿಸುತ್ತಾರೆ.

ಬಸವೇಶ್ವರನು ತನ್ನ ಒಂದು ವಚನದಲ್ಲಿ "ದಯವೇ ಬೇಕು ಸಕಲ ಪ್ರಾಣಿಗಳಲ್ಲಿ. ದಯವೇ ಧರ್ಮದ ಮೂಲವಯ್ಯ" ಎಂದು ಹೇಳಿದ್ದಾನೆ. ಹೀಗೆ ಅಹಿಂಸಾ ಧರ್ಮವನ್ನು ಶಿವಶರಣರು ಯಾವಾಗಲೂ ಬೋಧಿಸುತ್ತಾರೆ.

ಆದರೆ ಅವರ ಅಹಿಂಸಾ ಧರ್ಮವು ಬಹು ವ್ಯಾಪಕವಾದದ್ದು. ಅವರು ಕೇವಲ ಪ್ರಾಣಿಮಾತ್ರಕ್ಕಲ್ಲ, ಜಗತ್ತಿನಲ್ಲಿರುವ ಅನಂತ ಜೀವ ಜಂತುಗಳಿಗೂ ದಯೆಯನ್ನು ತೋರಿಸಬೇಕು ಎಂದು ಹೇಳುತ್ತಾರೆ. ಹಾಗೆಯೇ ಅವರು ತಮ್ಮ ನಡೆನುಡಿಗಳಲ್ಲಿಯೂ ಕೂಡ ಕ್ರೂರ ಶಬ್ದಗಳನ್ನು ಉಪಯೋಗಿಸಬಾರದು. ಒಂದು ವೇಳೆ ಉಪಯೋಗಿಸಿದರೆ ಅದು ಅಹಿಂಸಾ ಧರ್ಮವನ್ನು ಪಾಲಿಸಿದಂತೆ ಆಗುವದಿಲ್ಲೆಂದು ಹೇಳುತ್ತಾರೆ. ಹೀಗೆ ಅವರ ವಿಚಾರಗಳಿದ್ದು ಇವು ಮನುಷ್ಯನ ಉಚ್ಚ ವರ್ತನೆಯನ್ನು ತೋರಿಸುತ್ತವೆ.

ಆದರೆ ಈ ಅಹಿಂಸಾ ಧರ್ಮವು ಹಗುರಾದ ಕಾರ್ಯವಲ್ಲ. ಇದು ಯಾರಿಗೆ ಶಕ್ಯವೆಂದರೆ ಜಗತ್ತಿನ ಎಲ್ಲ ವಸ್ತುಗಳೊಡನೆ ಸಮರಸಭಾವವುಳ್ಳವನಾಗಿರಬೇಕು. ಸೃಷ್ಟಿಯ ಎಲ್ಲ ಪದಾರ್ಥಗಳಲ್ಲಿ ಮಮತೆ ಅಥವಾ ಸ್ನೇಹಭಾವವುಳ್ಳವನಾಗಿರಬೇಕು, ವಸ್ತುಗಳಲ್ಲಿರುವ ಚೈತನ್ಯದೊಡನೆ ಸಾಮರಸ್ಯದಿಂದಿರಬೇಕು, ದುಷ್ಟ ಪ್ರವೃತ್ತಿಗಳನ್ನು ಮತ್ತು ಶಕ್ತಿಗಳನ್ನು ದೂರಮಾಡಬೇಕು, ಸ್ವಾರ್ಥತೆಯನ್ನು ಹೊಡೆದೋಡಿಸಬೇಕು, ಇದನ್ನು ತಿಳಿದುಕೊಂಡು ಯಾರ್ವ ವರ್ತಿಸುತ್ತಾನೋ ಅವನು ಅಹಿಂಸಾ ಧರ್ಮದಿಂದ ನಡೆಯಲು ಪಾತ್ರತೆವನ್ನು ಹೊಂದುತ್ತಾನೆ.

ದಸರಯ್ಯನೆಂಬ ಹೆಸರಿನ ಒಬ್ಬ ಶಿವಶರಣನಿದ್ದಾನೆ. ಅವನ ಚರಿತ್ರೆಯೊಂದಿದ್ದು ಈ ಚರಿತ್ರೆ ರಚಿಸಿದವನು ನಾವು ಮೇಲೆ ಹೇಳಿದ ವಿಷಯಗಳಿಗೆ ತನ್ನ ಬರಹದಲ್ಲಿ ಮಹತ್ವ ಕೊಟ್ಟದ್ದು ಕಂಡುಬರುತ್ತದೆ. ಅದನ್ನೇ ನಾವು ಇಲ್ಲಿ ಉಲ್ಲೇಖಿಸುತ್ತೇವೆ.



ದಸರಯ್ಯನೆಂಬ ಶಿವಶರಣನು ರಾಮಗೊಂಡೆ ಎಂಬ ಗ್ರಾಮದಲ್ಲಿ ವಾಸಮಾಡುತ್ತಿದ್ದನು. ಈ ಗ್ರಾಮವು ಎಲ್ಲಿದೆ ಎಂಬುದು ನಮಗೆ ತಿಳಿದು ಬಂದಿಲ್ಲ. ದಸರಯ್ಯನು ಶಿವಾನುಭವಿಯಾಗಿ ಧರ್ಮಾಚಾರದಲ್ಲಿದ್ದುಕೊಂಡು ಅಹಿಂಸಾ ವ್ರತವನ್ನು ಆಚರಿಸುವವನಾಗಿದ್ದನೆಂದು ಅವನ ಈ ಚರಿತ್ರಕಾರನು ಹೇಳುತ್ತಾನೆ. ಈ ಧರ್ಮಾಚಾರದ ರೀತಿಯು ಕೆಳಗೆ ಹೇಳಲ್ಪಟ್ಟಿದೆ. ಬಸವೇಶ್ವರನ ವಚನವನ್ನು ಉದಹರಿಸುತ್ತ ಈ ಬಗ್ಗೆ ಅವನು ಅನ್ನುವದೇನಂದರೆ:-

"ಭಕ್ತನು ಶಾಂತನಾಗಿರಬೇಕು, ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯನಾಗಿರಬೇಕು, ಭೂತ ಹಿತವಹ ವಚನವ ನುಡಿಯಬೇಕು. ಲಿಂಗ ಜಂಗಮದಲ್ಲಿ ಕುಂದು ನಿಂದೆಗಳಿಲ್ಲದಿರಬೇಕು. ಸಕಲ ಪ್ರಾಣಿಗಳ ತನ್ನಂತೆ ಭಾವಿಸಬೇಕು. ತನು ಮನ ಧನವ ಗುರುಲಿಂಗ ಜಂಗಮಕ್ಕೆ ಸಮರ್ಪಿಸಬೇಕು. ಅಪಾತ್ರ ದಾನವ ಗೆಯ್ಯದಿರಬೇಕು. ಇದೇ ಮೊದಲಲ್ಲಿ ಬೇಹ ಶೌಚ ನೋಡಾ. ಲಿಂಗವ ಪೂಜಿಸಿ ಪ್ರಸಾದವ ಪಡೆವಡೆ ಎನಗಿದೇ ಸಾಧನವು ನೋಡಾ" ಎಂದು ಶ್ರೀ ಬಸವೇಶ್ವರ ದೇವರು ತಮ್ಮ ವಚನದಲ್ಲಿ ಹೇಳಿದ್ದಾರೆ.

ಹಾಗೆಯೇ ಹಾವಿನಹಾಳ ಕಲ್ಲಿದೇವನೆಂಬ ಶರಣನು ಹೇಳುವದೇನಂದರೆ-

"ತನ್ನ ಗುಣವ ಹೊಗಳಬೇಡ. ಇದಿರ ಗುಣವ ಹಳಿಯಬೇಡ. ಕೆಮ್ಮನೊಬ್ಬರ ನುಡಿಯ ಬೇಡ. ನುಡಿದು ನಂಪಿತನಾಗಬೇಡ. ತನ್ನ ಮನ ವಿಕಳನಾಗಿ ಇದಿರ ಮನವ ನೋಯಿಸಬೇಡ. ತಾನು ಬದುಕುವ ವೈಸು ದಿನ ? ಸಮತೆ ಸಮಾಧಾನ ತುಂಬಿ ತುಳುಕಬೇಕು. ಮಹಾಲಿಂಗ ಕಲ್ಲೇಶ್ವರ ನಿಚ್ಚಳ ನಿಜವನರಿತ ಬಳಿಕ ಸಕಲರೊಳಗೆ ಬಚ್ಚ ಬರಿಯ ಮರುಳಾಗಿರಬೇಕು"

ಇದಲ್ಲದೆ ನಾವು ಅನೇಕ ಮಹತ್ವದ ತತ್ವಗಳಿರುವ ಅನೇಕ ವಚನಗಳನ್ನು ಹಿಂದೆ ಉಲ್ಲೇಖಿಸಿದ್ದೇವೆ. ಒಬ್ಬ ಮನುಷ್ಯನು ಅವುಗಳಂತೆ ಆಚರಿಸುತ್ತಲಿದ್ದರೆ ಅವನಲ್ಲಿ ದಯಾಭಾವವು ಅಥವಾ ಅಹಿಂಸಾ ವೃತ್ತಿಯು ನೆಲಿಸುವದು. ಈ ಬಗೆಯ ಶುದ್ಧ ವರ್ತನೆಯುಳ್ಳವನಿರದಿದ್ದರೆ ಅಹಿಂಸಾ ಭಾವವು ಮನುಷ್ಯನಲ್ಲಿ ಉಂಟಾಗಲಾರದು. ದಸರಯ್ಯನು ಹೀಗೆಯೇ ಶುದ್ಧವರ್ತನೆಯಿಂದ ಆಚರಿಸುವವನಾಗಿದ್ದನು.

ಅವನ ಚರಿತ್ರಕಾರನು ಹೇಳುವದೇನಂದರೆ, ದಸರಯ್ಯನು ಮನೆಯ ಹೊರಗೆ ಹೋಗುತ್ತಿರುವಾಗ ತನ್ನ ನುಡಿಯಲ್ಲಿ "ಸಚರಾಚರ ಪ್ರಾಣಿಗಳೆಲ್ಲವು

"ಸುಖದಿಂದ ಬಾಳಲಿ" ಎಂದು ಉಚ್ಚರಿಸುತ್ತ ಹೋಗುವನು. ಸಕಲ ಪ್ರಾಣಿಗಳನ್ನು ತನ್ನಂತೆ ಭಾವಿಸುವನು. ಪ್ರಾಣಿಗಳಿಗೆ ಎಷ್ಟು ಮಾತ್ರವೂ ಹಿಂಸೆ ಕೊಡುತ್ತಿರಲಿಲ್ಲ. ಶಿವಶರಣರಿಗೆ ಅನೇಕ ವ್ರತಗಳಿರುತ್ತವೆ. ಆದರೆ ದಸರಯ್ಯನು ಅಹಿಂಸಾ ವ್ರತವನ್ನು ತನ್ನ ಆಚರಣೆಯಲ್ಲಿ ಮುಖ್ಯವಾಗಿಟ್ಟುಕೊಂಡು ಶಿವಾನುಭವದಂತೆ ನಡೆಯುವನು.

ಅವನು ತನ್ನ ಶಿವಾನುಭವದ ಬೋಧೆಯಲ್ಲಿ ಅನಿತ್ಯವಾದ ಸಂಸ್ಕೃತಿಯನ್ನು ನಂಬಲಾಗದು. ಹಿತವರಾದವರನ್ನು ಸ್ತುತಿಸಲಾಗದು. ಅಹಿತರಾದವರನ್ನು ನಿಂದಿಸಲಾಗದು. ಮನ ಮುಂದುಮಾಡಿ ಆರನ್ನೂ ಧಿಕ್ಕರಿಸಲಾಗದು. ಸುವಿಚಾರವನ್ನು ಇತರರಿಗೆ ಹೇಳಿದೆನೆಂದು ತನ್ನ ಬಣ್ಣಿಸಲಾಗದು. ಹಿಗ್ಗಲಾಗದು. ಅಜ್ಞಾನದಿಂದ ಮನವಿಕಳನಾಗಿ ಪರರ ಮನವ ನೋಯಿಸಲಾಗದು. ಕ್ಷಮೆ, ದಮೆ, ಶಾಂತಿ, ಸದಾಚಾರ ಸದ್ಭಕ್ತಿ ಇವುಗಳಿಂದೊಡಗೂಡಿರಬೇಕು. ಶಿವತತ್ವಾನುಭವದಲ್ಲಿ ಎರಡಿಲ್ಲವೆಂದು ತಿಳಿಯಬೇಕು. ಯಾರಾದರೂ ನಿಂದಿಸಿದರೆ ತಗ್ಗಲಾಗದು. ವಂದಿಸಿದರೆ ಹಿಗ್ಗಲಾಗದು. ಸದಾಚಾರ ಸದ್ಭಕ್ತಿಯುಳ್ಳ ಶರಣರಲ್ಲಿ ಶಿವನಿರುವನೆಂದು ಭಾವಿಸಬೇಕು. ತಾನು ಹೆರವರನ್ನು ನಿಂದಿಸದೆ ತಾನು ಅವರ ನಿಂದೆಗೆ ಒಳಗಾಗದೆ ಸದಾಚಾರ ಸದ್ಭಕ್ತಿಯಲ್ಲಿರುವದೇ ಶಿವಧರ್ಮವೆಂದು ತಿಳಿಯಬೇಕು. ನಡೆವಲ್ಲಿ ನುಡಿವಲ್ಲಿ ಜೀವಹಿಂಸೆ ಮಾಡ ಕೂಡದು ಎಂದು, ಬೋಧಿಸುತ್ತ ಅದರಂತೆ ತಾನೂ ನಡೆಯುತ್ತ ಜನರಲ್ಲಿ ಅತ್ಯಂತ ಪ್ರಸಿದ್ಧನಾಗಿದ್ದನು. ಹೀಗೆ ಅವನು ಶಿವಾನುಭವದಂತೆ ನಡೆಯುತ್ತಿರುವಲ್ಲಿ ಚರಾಚರ ಪ್ರಾಣಿಗಳಲ್ಲೆಲ್ಲ ಅವನು ಅತ್ಯಂತ ಪ್ರೀತಿಯನ್ನು ವಹಿಸಿದವನಾಗಿದ್ದನು. ಇದರಿಂದ ಅವನಲ್ಲಿ ಒಂದು ಅಲೌಕಿಕವಾದ ಲಿಂಗ ಶಕ್ತಿಯು ಉಂಟಾಗಿ ಅದರ ಮೂಲಕ ಅವನು ಸಚರಾಚರ ಪ್ರಾಣಿಗಳ ಸಾವು ನೋವುಗಳನ್ನೂ ಅವುಗಳು ಹೊಂದುವ ಕುಂದುಕೊರತೆಗಳನ್ನೂ ಅಂತಜ್ಞಾನದಿಂದ ತಿಳಿಯುವವನಾದನು. ಶಿವಚೈತನ್ಯವು ಹೀಗೆ ತನ್ನಲ್ಲಿ ಪ್ರಸ್ಫುರಿಸಹತ್ತಲು ಚರಾಚರ ಪ್ರಾಣಿಗಳಲ್ಲಿಯ ಬಯಕೆಗಳ ಅರಿವು ದಸರಯ್ಯನಿಗೆ ಉಂಟಾಗಹತ್ತಿತು. ಹೀಗೆ ದಸರಯ್ಯನು ಶಿವಾನುಭವದ ಆಚರಣೆಗಳನ್ನು ಅವನು ಯಾವ ಹಠಯೋಗದ ಸಾಧನೆಗಳನ್ನು ಇಟ್ಟುಕೊಳ್ಳದೆ ಶುದ್ಧ ಮನಸ್ಸಿನಿಂದ ಆಚರಿಸುವದನ್ನೇ ತನ್ನ ಆಚರಣೆಯಲ್ಲಿ ಇಟ್ಟುಕೊಂಡಿದ್ದನು.



S. S. High School ... Regd. No. 251/315 Section MISC Dt. 5

ಮಹಾತ್ಮಾ ಗಾಂಧಿಯವರು ಅಹಿಂಸೆಯ ಆಚರಣೆಯನ್ನು ಜನರಿಗೆ ಅರುಹಲು ಅಹಮದಾಬಾದಿನಲ್ಲಿ ಸಾಬರಮತಿ ಹೊಳೆಯ ದಂಡೆಯ ಮೇಲೆ ಸತ್ಯಾಗ್ರಹಾಶ್ರಮವನ್ನು ಸ್ಥಾಪಿಸಿದ್ದರು. ಅದರಲ್ಲಿ ಅವರು ಕೈಕೆಲಸಗಳನ್ನು ಕಲಿಸುವದಕ್ಕೆ ಮಹತ್ವ ಕೊಟ್ಟದ್ದರು. ನಾಡಿನ ಇತಿಹಾಸ ಭೂಗೋಲವನ್ನೂ ಕಲಿಸುವರು. ಅವರು ದಾಂಡೀಕಡೆಗೆ ದಾಡು ಹೊರಟಾಗ ಮಾರ್ಗದಲ್ಲಿ ಹತ್ತುವ ಗ್ರಾಮಗಳಲ್ಲಿ ಅಸ್ಪೃಶ್ಯ ಜನರ ಜನಸಂಖ್ಯೆ ಎಷ್ಟು, ಹಳ್ಳಿಗರಲ್ಲಿ ಶಿಕ್ಷಣದ ಪ್ರಸಾರವೆಷ್ಟು, ಅವರು ಶುಚಿಯಾಗಿರುವದೋ ಹೇಗೆ, ಎಂಬ ವಿಷಯಗಳ ಬಗ್ಗೆ ಮಾಹಿತಿಯನ್ನು ಕೂಡಿಸುತ್ತ ಜನರಿಗೆ ಬೋಧೆ ಮಾಡುತ್ತ ಹೊರಟರು. ಅವರು ಇಂಥ ಕಾರ್ಯಕ್ರಮದಂತೆ ಆಚರಿಸಿದಲ್ಲಿ ಜನರು ಅಹಿಂಸಾ ಧರ್ಮದಂತೆ ಆಚರಿಸಲು ಯೋಗ್ಯತೆಯನ್ನು ಪಡೆಯುವರೆಂದು ಭಾವಿಸಿದ್ದರು. ಆದರೆ ಶಿವಶರಣರು ಮನಸ್ಸಿನ ಮೇಲೆ ಪ್ರತ್ಯಕ್ಷ ಪರಿಣಾಮ ಮಾಡಬಹುದಾದಂಥ ಮೇಲೆ ಹೇಳಿದ ಲಿಂಗ ಶರೀರಿಯ ನಡೆಗಳನ್ನು ತಮ್ಮ ಕಾರ್ಯಕ್ರಮದಲ್ಲಿ ಇಟ್ಟುಕೊಂಡು ದಿನಾಲು ಆಚರಿಸುತ್ತಿದ್ದರು. ಅವರ ಕಾರ್ಯಕ್ರಮಗಳಲ್ಲಿ ಈಗಿನ ಸಾರ್ವಜನಿಕ ಸುಧಾರಣೆಗಳ ವಿಷಯಗಳಿರದಿದ್ದರೂ ಮನಸ್ಸಿನ ಯೋಗ್ಯತೆಯನ್ನು ಕಾಯಮವಾಗಿ ಹೆಚ್ಚಿಸುವ ವಿಷಯ ವಿಷಯಗಳೇ ಇರುತ್ತಿದ್ದವು.

ಹೀಗಿರಲು ದಸರಯ್ಯನು ಒಂದು ದಿವಸ ತನ್ನ ಪೂಜೆಗೆ ಪುಷ್ಪವನ್ನೆತ್ತುವದಕ್ಕೋಸ್ಕರ ತೋಟಕ್ಕೆ ಹೋಗಿ ಅಲ್ಲಿ ಒಂದು ಗಿಡದ ಮೇಲಿನ ಪುಷ್ಪವನ್ನು ಮೇಲೆತ್ತಿದನು. ಆಗ ಗಿಡವು 'ಅಯ್ಯೋ ನಾನು ನೊಂದೆನು' ಎಂದು ಅನ್ನುವ ಸ್ವರವು ಅವನಿಗೆ ಕೇಳಬಂದಿತು. ಅದನ್ನು ಕೇಳಿ ದಸರಯ್ಯನು ಮೃದುವಾಗಿ ಆ ಪುಷ್ಪವನ್ನು ಮುಟ್ಟಲು ಅದು ನರಳುವ ಶಬ್ದವು ಕೇಳಿಸಿತು. ಆದರೂ ದಸರಯ್ಯನು ತನ್ನ ಪೂಜೆಗೋಸ್ಕರ ಆ ಪುಷ್ಪವನ್ನು ಹರಿದುಬಿಡಲು ಅದರೊಳಗಿಂದ ರಸಪ್ರವಾಹವು ರಕ್ತದ ಧಾರೆಯಾಗಿ ಬೀಳುವಂತೆ ಅವನ ದೃಷ್ಟಿಗೆ ಬಿದ್ದಿತು. ಅದನ್ನು ದಸರೇಶ್ವರನು ಕಂಡು ಅತ್ಯಂತ ಮನಸ್ಸು ನೊಂದವನಾಗಿ— ಅಯ್ಯೋ ಗಿಡಗಳ ಮೇಲಿರುವ ಹೂಗಳನ್ನು ಹೀಗೆ ಕೊಯ್ಯುವದು ಹಿಂಸೆಯಲ್ಲವೇ ? ದಯದಿಂದ ಬಿಟ್ಟು ಧರ್ಮವದಾವುದು ? ಎಂದಿರುವ ಗುರುವಾಕ್ಯವನ್ನು ನೆನಪಿಗೆ ತಂದು ದಸರಯ್ಯನು ತನ್ನ

ಲಿಂಗಪೂಜೆಗೋಸ್ಕರ ಬೇಕಾಗಿದ್ದ ಹೂವುಗಳನ್ನು ಕೊಯ್ಯುವದನ್ನು ಆ ಕ್ಷಣವೇ ಬಿಟ್ಟುಕೊಟ್ಟನು.

ಮುಂದೆ ದಸರಯ್ಯನು ತಾನು ಗಿಡದ ಕೆಳಗೆ ಪೂಜೆಯನ್ನು ಹೂವಿನಿಂದ ಮಾಡಬೇಕೆಂದು ಬಯಸಿ ಒಂದು ಸ್ಥಳವನ್ನು ಅಣಿಮಾಡಿ ಚಾಪೆಯನ್ನು ಮರೆ ಗಟ್ಟಿ ಅಲ್ಲಿ ಉದುರಿಬಿದ್ದ ಪುಷ್ಪಗಳನ್ನು ಎತ್ತಿ ತಂದು ಲಿಂಗಾರ್ಚನೆಯನ್ನು ಮಾಡುವವನಾದನು. ಈ ರೀತಿಯಾಗಿ ಅವನು ಬಿದ್ದ ಹೂವುಗಳನ್ನು ದಿನಾಲು ಆರಿಸಿ ತರುತ್ತ ತನ್ನ ನಿತ್ಯ ಲಿಂಗಾರ್ಚನೆಯನ್ನು ಮಾಡಹತ್ತಿದನು. ಇದೇ ಅವನ ಲಿಂಗ ಪೂಜೆಯ ನಿತ್ಯ ಕ್ರಮವಾಯಿತು.

ಅವನ ಈ ಅಹಿಂಸಾ ಭಾವವು ದಿನೇ ದಿನೇ ಹೆಚ್ಚುತ್ತಲೇ ಹೋಯಿತು. ಅವನು ಪುಷ್ಪಗಳನ್ನು ಹರಿಯುವದು ಮಾತ್ರವಲ್ಲ, ಗಿಡಗಳ ಟೊಂಗೆಗಳು ನೊಂದಾವೆಂದು ಅವುಗಳನ್ನು ಬಲವಾಗಿ ಬಗ್ಗಿಸುತ್ತಿರಲಿಲ್ಲ. ದಾರಿ ನಡೆವಲ್ಲಿ ಜೀವಜಂತುಗಳಿಗೆ ಹಿಂಸೆಯಾದೀತೆಂದು ಸಾವಧಾನದಿಂದ ನಡೆಯುವನು. ಯಾವಾಗಲೂ ಹಿತಕರವಾದ ನುಡಿಗಳನ್ನೇ ಎಲ್ಲರ ಗೂಡ ನುಡಿಯುವನು. ಯಾರ ಮನಸ್ಸನ್ನೂ ನೋಯಿಸನು. ಈ ವರ್ತನೆಯು ಅವನಲ್ಲಿ ಹೆಚ್ಚುತ್ತಲೇ ಬಂದಿತು. ಹೀಗೆ ಪಶುಪಕ್ಷಿ, ವನಸ್ಪತಿ, ಮನುಷ್ಯರು ಇವರುಗಳಲ್ಲೆಲ್ಲ ಅಹಿಂಸೆಯನ್ನು ತಾಳಿದವನಾದನು. ಈ ಅಹಿಂಸೆಯು ಮನುಷ್ಯನ ಕೇವಲ ಬಾಹ್ಯ ಅಂಗಕ್ಕೆ ಮಾತ್ರವಲ್ಲ, ಪ್ರಾಣಿಗಳೆಲ್ಲವುಗಳ ಮನ ಬುದ್ಧಿ ಚಿತ್ತ ಇವುಗಳಿಗೆ ಸಹ ನೋವು ಉಂಟಾದೀತೆಂದು ಬಹು ಸಮಾಧಾನದಿಂದ ವರ್ತಿಸುವನು.

ದಸರಯ್ಯನು ಬಹು ವಿದ್ವಾಂಸನು. ಅವನು ವಚನಕಾರನೂ ಇದ್ದಾನೆ. 'ದಸರೇಶ್ವರಲಿಂಗ'ವೆಂಬುದು ಅವನ ಮುದ್ರಿಕೆಯು. ಅವನ ಒಂದು ವಚನ ವಿದ್ದು ಆದರಲ್ಲಿ ತಾನು ಯಾಕೆ ಹೂವುಗಳನ್ನು ಹರಿಯುವದಿಲ್ಲೆಂಬುದಕ್ಕೆ ಕಾರಣವನ್ನು ಕೊಟ್ಟಿದ್ದಾನೆ. ಹೂವುಗಳು ಪರಮಾತ್ಮನಿಗೆ ಅರ್ಪಿಸುವದ ಕ್ಕೋಸ್ಕರ ಇವೆ. ಆದರೆ ಅರ್ಪಿಸತಕ್ಕ ವಸ್ತುವು ತನ್ನದಾಗಿರಬೇಕು. ಹೂವು ಗಿಡದ್ದದೆ. ಅದು ತನ್ನದಲ್ಲ. ಆದ್ದರಿಂದ ಇಂಥ ವಸ್ತುವು ತನ್ನದೆಂದು ಅದನ್ನು ಹೇಗೆ ಅರ್ಪಿಸಲಿಕ್ಕೆ ಬಂದೀತೆಂದು ತಿಳಿದು ಅದನ್ನು ಅರ್ಪಿಸಲು ಬರುವ ದಿಲ್ಲವೆಂಬ ಕಾರಣವನ್ನು ಅವನು ಕೊಟ್ಟಿದ್ದಾನೆ.

ವಚನ:— "ಉದುರಿ ಬೀಳುವನ್ನಕ್ಕ ನಿನ್ನ ಹಂಗಯ್ಯ! ಉದುರಿ ಬಿದ್ದಲ್ಲಿ ಬಳಿಕ ಎನ್ನೊಡವೆಯಯ್ಯ ತಂದೆ! ನಾ ಪೂಜಿಸುವನ್ನಕ್ಕ



ನೀ ದೇವ. ಎನ್ನ ಪೂಜೆಗೊಳಗಾದಲ್ಲಿ ನೀ ಭಕ್ತ, ನಾ ನಿತ್ಯನಯ್ಯ. ಇಂತೀ ಸರ್ವ ದಯಾವಸ್ತು ಬೀಜವಲಾ ನೀನು. ಸರ್ವಮಲತ್ರಯ ದೂರನೇ, ಸರ್ವಾಂಗ ಸಂತೋಷಿಯೇ, ನಿಗರ್ವಿಯೇ, ಎಲೆ ದಸರೇಶ್ವರ ಲಿಂಗವೇ, ತಥ್ಯಮಿಥ್ಯವ ಜಟ್ಟಿನಗೆ ನಿನ್ನ ಕಾರುಣ್ಯ ಪ್ರಸಾದವ ಕರು ಣಿಸಯ್ಯ.

ಭಾವಃ— ಗಿಡದ ಮೇಲಿಂದ ಹೂವು ಕೆಳಗೆ ಬಿದ್ದ ಬಳಿಕ ಅದು ಗಿಡ ದ್ದಲ್ಲ. ಇಂಥದನ್ನು ನಾನು ಸ್ವೀಕರಿಸಿದ ಬಳಿಕ ಅದು ನನ್ನದಾಯಿತು. ಆದ್ದ ರಿಂದ ಅದನ್ನು ಪರಮಾತ್ಮನಿಗೆ ಅರ್ಪಿಸಲು ಬರುತ್ತದೆ. ಆದರೆ ಅರ್ಪಿಸು ವಲ್ಲಿ ಇಂಥಿಂಥ ವಸ್ತುವೇ ಇರಬೇಕೆಂದು ನೀನು ಅಪೇಕ್ಷೆಬಟ್ಟರೆ ನೀನು ದೇವನೆಂದು ಹೇಳಲಿಕ್ಕೆ ಬರಲಾರದು. ನಿನಗೆ ಆಶೆ ಎಂಬುದು ಇದ್ದಹಾಗೆ ಆಯಿತು. ಹೀಗೆ ಆಶೆ ನಿನಗಿದ್ದರೆ ನೀನು ದೇವನಾ ಗಲು ಬರಲಾರದು. ಆದ್ದರಿಂದ ನಾನು ಅರ್ಪಿಸುವ ಹೂವು ಬಾಡಿದ್ದಿದ್ದರೂ ನೀನು ಅದನ್ನು ಪ್ರೀತಿಯಿಂದ ಸ್ವೀಕರಿಸಲೇ ಬೇಕು. ಸ್ವೀಕರಿಸದಿದ್ದರೆ ನೀನು ದೇವನಾಗಲಾರಿ, ಎಂದು ದಸರಯ್ಯನು ಹೇಳುತ್ತಾನೆ. ಆದ್ದರಿಂದ ಬಿದ್ದ ಹೂವುಗಳು ಬಾಡಿದವಿದ್ದರೂ ಅವು ದೇವತಾರ್ಚನೆಗೆ ಸಲ್ಲುತ್ತವೆಂದು ದಸರ ಯ್ಯನ ಅಭಿಪ್ರಾಯವು.

ವಚನಃ— ಸರ್ವಮಯ ನೀನಾದಲ್ಲಿ ಆವುದನಹುದೆಂಬೆ? ಆವುದ ನಲ್ಲವೆಂಬೆ? ಸರ್ವಚೈತನ್ಯ ನಿನ್ನ ತಂತ್ರಗಳಿಂದಾದುವಾಗಿ ಇನ್ನಾವುದ ಕಾಯುವೆ? ಇನ್ನಾವುದ ಕೊಲುವೆ? ತರುಲತೆ ಸ್ಥಾವರ ಜೀವಂಗಳೆಲ್ಲ ನಿನ್ನ ಕಾರುಣ್ಯದಿಂದ ಒಗೆದವು. ಅದ ಹರಿದು ಇನ್ನಾರಿಗರ್ಪಿಸುವೆ ತೊಟ್ಟು ಬೀಳುವನ್ನಕ್ಕ?

ಭಾವಃ— ಪರಮಾತ್ಮನು ಜಗತ್ತಿನ ತುಂಬೆಲ್ಲ ಇದ್ದಾನೆ. ಹೀಗಿದ್ದ ಬಳಿಕ ಇಂಥ ವಸ್ತುವು ಅವನದು ಅಲ್ಲ, ಇಂಥ ವಸ್ತುವು ಅವನದು ಇದೆ ಎಂದು ಹೇಳಲು ಯಾರಿಗೂ ಬರಲಾರದು. ಪರಮಾತ್ಮನ ತಂತ್ರದ ಮೂಲಕ ಜಗ ತ್ತಿನಲ್ಲಿಯ ವಸ್ತುಗಳೆಲ್ಲ ವ್ಯವಹರಿಸುತ್ತವೆ. ಆದ್ದರಿಂದ ನಾನು ಇಂಥವನನ್ನು ಕಾಯುತ್ತೇನೆ, ಇಂಥವನನ್ನು ಕೊಲ್ಲುತ್ತೇನೆ ಎಂದು ಹೇಳುವ ಸ್ವಾತಂತ್ರ್ಯವು ನನ್ನಲ್ಲಿ ಇಲ್ಲ. ಜಗತ್ತಿನಲ್ಲಿಯ ವಸ್ತುಗಳೆಲ್ಲ ಪರಮಾತ್ಮನ ಕಾರುಣ್ಯದಿಂದ ಉಂಟಾಗಿರುತ್ತವೆ. ಆದ್ದರಿಂದ ಒಂದು ಪುಷ್ಪವನ್ನು ಹರಿದು ಮತ್ತೊಬ್ಬರಿಗೆ

ಕೊಡಲಿಕ್ಕೆ ನನಗೆ ಹೇಗೆ ಬಂದೀತು ? ಅದು ತಾನಾಗಿಯೇ ಗಿಡದಿಂದ ಕಳಚಿ
ಬೀಳಬೇಕು. ಆ ಮೇಲೆ ನಾನು ಅದನ್ನು ಪರಮಾತ್ಮನಿಗೆ ಅರ್ಪಿಸತಕ್ಕದ್ದು.

ದಸರೇಶ್ವರನು ಅತ್ಯಂತವಾಗಿ ಅಹಿಂಸಾ ಧರ್ಮವನ್ನು ಪಾಲಿಸುವವನು.
ಅವನು ಅನ್ನುವದೇನಂದರೆ, ಗಿಡದ ಹೂವು ಗಿಡದ್ದಿದ್ದು ಅದನ್ನು ಜಗ್ಗಿ ತೆಗೆದು
ಕೊಳ್ಳುವ ಹಕ್ಕು ನನಗಿಲ್ಲ. ಆ ಹೂವು ತಾನಾಗಿಯೇ ಕೆಳಗೆ ಬೀಳಬೇಕು.
ಆ ಮೇಲೆ ನಾನು ಅದನ್ನು ಎತ್ತಿತೆಗೆದುಕೊಳ್ಳಬೇಕು. ಜನರು ಬಿದ್ದ ಹೂವು
ಅರ್ಪಿಸುವದು ಯೋಗ್ಯವಲ್ಲವೆಂದು ಅನ್ನುವದುಂಟು. ಆದ್ದರಿಂದ ಅವನು ತನ್ನ
ಅಭಿಪ್ರಾಯವನ್ನು ಸಮರ್ಥಿಸಿಕೊಳ್ಳಲು ಈ ವಚನವನ್ನು ನುಡಿದಿದ್ದಾನೆಂದು
ತೋರುತ್ತದೆ.

ದಸರಯ್ಯನ ಈ ಅಹಿಂಸಾ ವರ್ತನೆಯ ಮೂಲಕ ನಾಡಿನಲ್ಲೆಲ್ಲ ಅವನ
ಕೀರ್ತಿವಾರ್ತೆಗಳು ಬಹಳ ಹಬ್ಬಿದವು. ಅವನು ಒಬ್ಬ ಶ್ರೇಷ್ಠ ಶರಣನೆಂದು
ಲೋಕದ ಜನರು ನುಡಿಯಹತ್ತಿದರು. ಆದರೆ ಜಗತ್ತಿನಲ್ಲಿ ದುರ್ಜನರು ತುಂಬಿ
ರುತ್ತಾರೆ. ಅವರು ಮಾತ್ರ ದಸರಯ್ಯನ ಈ ಕೀರ್ತಿಯನ್ನು ಕೇಳಿ ಅಸೂಯೆ
ಯುಳ್ಳವರಾಗಿ ಅದನ್ನು ಸಹಿಸಲಾರದಾದರು. ಅವರು ತಮ್ಮ ತಮ್ಮೊಳಗೆ—
ನಮ್ಮೂರಲ್ಲಿ ದಸರಯ್ಯನೆಂಬುವನಿದ್ದಾನಂತೆ. ಅವನು ಯಾರನ್ನೂ ನಿಂದಿಸು
ವದಿಲ್ಲವಂತೆ. ಅವನು ಗಿಡದಲ್ಲಿಯ ಪುಷ್ಪವನ್ನೆತ್ತಿದ ಕೂಡಲೆ ಗಿಡವು ರಕ್ತ
ವನ್ನು ಸುರಿಸಿತಂತೆ. ಈತನ ಕ್ಷಮೆ ದಯೆಯನ್ನು ನಾವು ಪರೀಕ್ಷಿಸುವೆವು,
ಎಂದು ನುಡಿಯುತ್ತ ಅತ್ಯಂತ ಆವೇಶವನ್ನು ತಾಳಿ ದಸರಯ್ಯನಿಗೆ ಕೇಡು
ಬಗೆಯುವವರಾದರು.

ಈ ದುರ್ಜನರು ಒತ್ತಟ್ಟಿಗೆ ಸೇರಿ ಒಂದು ಕುಯುಕ್ತಿಯನ್ನು ಯೋಚಿಸಿ
ಊರಲ್ಲಿ ಒಬ್ಬ ದುಷ್ಟನು ಶರೀರದಲ್ಲಿ ಪುಷ್ಟನಾಗಿ ಕಳವು ಮಾಡುತ್ತಿರಲು
ಅವನು ಅಧಿಕಾರಿಗಳ ಕೈಗೆ ಸಿಕ್ಕಿಬಿದ್ದನು. ಅವರು ಪೂರ್ವದ ಪದ್ಧತಿಯಂತೆ
ಅವನ ಕಯ್ಯುಗಳನ್ನು ಕಡಿಸಿ ಹಾಕಿಸಿದ್ದರು. ಆದರೂ ಆ ದುಷ್ಟನು ತನ್ನ ಮೊದ
ಲಿನ ಕ್ರೂರ ಸ್ವಭಾವವನ್ನು ಬಿಡದೆ ಗ್ರಾಮದಲ್ಲಿ ವರ್ತಿಸುತ್ತಿದ್ದನು. ಅವ
ನನ್ನು ಮೋಟಮಲ್ಲುಗನೆಂದು ಜನರು ಕರೆಯುತ್ತಿದ್ದರು. ಅವನನ್ನು ಈ
ದುರ್ಜನರು ಹುಡುಕಿಕೊಂಡು ಬಂದು ತಮ್ಮೊಳಗೆ ಮಾತಾಡಿಕೊಂಡು
ಮೊದಲು ಅವನ ತಲೆಯನ್ನು ಬೋಳಿಸಿ, ಅವನಿಗೆ ಭಸಿತವನ್ನು ಉದ್ಧೂಳಿಸಿ
ಅವನ ಸೆಜ್ಜೆಯಲ್ಲಿ ಲಿಂಗವನ್ನಿಡದೆ ಅದನ್ನು ಬರಿದಾಗಿಟ್ಟು ಅದಕ್ಕೆ ಶಿವಧಾ



ರವನ್ನು ಮಾತ್ರ ಕಟ್ಟಿ ಅವನಿಗೆ ಕಾವಿ ಕಾಷಾಯಾಂಬರವನ್ನು ಉಡಿಸಿ ಅವ
ನಿಗೆ ಹೀಗೆ ಜಂಗಮವೇಷವನ್ನು ಅಳವಡಿಸಿದರು. ಆಮೇಲೆ ಅವರು ಅವನಿಗೆ–
ನೀನು ಇನ್ನುಮೇಲೆ ದಸರಯ್ಯನ ಬೆನ್ನಹಿಂದೆ ಹೋಗಿ ನಿನ್ನ ಮೋಟುಗ
ಯ್ಯಿಂದ ಅವನನ್ನು ಗುದ್ದಿ ಗುದ್ದಿ ಒಳಿತಾಗಿ ನೋಯಿಸು ಎಂದು ಹೇಳಿ
ಕಳುಹಿದರು.

ಆಗ ಆ ಮೋಟನು ಅಂಗಚೇಷ್ಟೆಗಳನ್ನು ಮಾಡುತ್ತ ದಸರಯ್ಯನಿದ್ದೆ
ಡೆಗೆ ಬಂದು ಅವನೊಡನೆ ಜಗಳ ತೆಗೆಯಬೇಕೆಂದು ಅವನ ಮೇಲೆ ತಾನೇ
ನುಗ್ಗಿ– ಎಲೋ ದಸರಯ್ಯನೇ ನಿನ್ನ ಕಣ್ಣು ಕಾಣುವದಿಲ್ಲವೇ? ನಿನ್ನ ಸೊಕ್ಕು
ಎಷ್ಟು? ನಿನ್ನನ್ನು ಕರೆದರೆ ನುಡಿಯದೆ ಹೋಗುತ್ತೀಯಲ್ಲಾ ಎಂದು ಗರ್ಜಿಸಿ
ತನ್ನ ಮೋಟುಗಯ್ಯಿಂದ ಅವನನ್ನು ಹೊಡೆಯಹತ್ತಿದನು.

ಆಗ ದಸರಯ್ಯನು ಇವನು ಅಂಗಹೀನನು, ಮೋಟನು ಎಂಬುದನ್ನು
ನೋಡಿ ಅವನನ್ನು ಹಿಂಸೆ ಮಾಡಬಾರದೆಂದು ತನ್ನ ಅಹಿಂಸಾ ವ್ರತವನ್ನು ನೆನೆದು
ಸುಮ್ಮನೆ ಅವನಿಂದ ಹೊಡಿಸಿಕೊಳ್ಳುತ್ತ ಸ್ತಬ್ಧನಾಗಿ ನಿಂತು ಬಿಟ್ಟನು! ಆದರೂ
ಆ ಮೋಟನು ಅವನನ್ನು ತನ್ನ ಮೋಟುಗೈಗಳಿಂದ ಹೊಡೆಯುವದನ್ನು ಬಿಡ
ಲಿಲ್ಲ. ಆಗ ದಸರಯ್ಯನ ಸಿರವು ಒಡೆಯಿತು, ಮೈ ಸೀಳಿತು, ರಂಧ್ರಗಳೊ
ಳಗಿಂದ ರಕ್ತವು ಹರಿಯತೊಡಗಿತು. ಆದರೂ ಅವನು ಎಷ್ಟು ಮಾತ್ರವೂ
ಸಿಟ್ಟನ್ನು ಹೊಂದಲಿಲ್ಲ. ಆದರೆ ಆಮೋಟನು ಹೊಡೆಯುವಲ್ಲಿ ಅವನ ಕೈನೊಂದು
ತ್ತವೆಯಲ್ಲಾ ಎಂದು ಅವನಿಗೋಸ್ಕರ ಪರಿತಪಿಸಿದನು. ಇದನ್ನು ಆಮೋಟ
ನಿಗೆ ಹೇಳಬೇಕೆನ್ನುವಷ್ಟರಲ್ಲಿ– ಹೇಗ ಹೇಳಿದರೆ ಆ ಮೋಟನ ಮನಸ್ಸುನೊಂ
ದೀತಲ್ಲಾ ಎಂಬ ವಿಚಾರವು ಹೊಳೆಯಲು ಅವನು ಕೂಡಲೇ ಸುಮ್ಮನಾ
ದನು. ಆಗ ಆ ಮೋಟನು ದಸರಯ್ಯನನ್ನು ಹೊಡೆದು ಹೊಡೆದು ಅವನೇ
ಶ್ರಮಬಟ್ಟು ಕಡೆಗೆ ಸುಮ್ಮನೆ ನಿಂತುಬಿಟ್ಟನು. ಆಗ ದಸರಯ್ಯನು ಎದ್ದು
ನಿಂತು ಆ ಮೋಟನನ್ನು ಹಿಡಿದು ಅವನ ಮೆಯ್ಯನ್ನು ತಡವರಿಸುತ್ತ–ಹರ
ಹರಾ! ಏನು ಕಾರಣ ಇಷ್ಟು ಬಳಲಿದಿರಿ! ಚರಲಿಂಗವೇ ನಿಮ್ಮ ಹಸ್ತಗಳು
ನೊಂದವೇ ದೇವಾ ? ಎಂದು ನುಡಿಯುತ್ತ ಆ ವೇಷಧಾರಿ ಜಂಗಮನ
ಕೈಕಾಲುಗಳನ್ನು ತಡವರಿಸಿ ಒತ್ತಹತ್ತಿದನು. ನೆರೆದ ಜನರು ಅದನ್ನು ನೋಡಿ
ಚಕಿತರಾದರು. ಆದರೆ ಅಷ್ಟರಲ್ಲಿ ಒಂದು ಅದ್ಭುತವಾಯಿತು. ದಸರ
ಯ್ಯನು ಅಹಿಂಸಾ ವ್ರತವನ್ನು ಅಚ್ಚಳಿಯದೆ ಪಾಲಿಸುತ್ತ ಬಂದಿದ್ದರಿಂದ
ಅವನ ಮಹಿಮೆಯು ಆಗ ಹೊರಬಿದ್ದಿತು. ಅವನ ಪ್ರೇಮಪೂರಿತವಾದ

ಹಸ್ತಸ್ಪರ್ಶನವು ಆಮೋಟನಿಗೆ ಆದಕೂಡಲೇ ಅವನ ಮೋಟುಗೈಗಳು ಕೂಡಲೆ ಚಿಗಿತವು! ಅವನ ಬರಿದಾದ ಸಜ್ಜೆಯಲ್ಲಿ ನಿಜವಾದ ಲಿಂಗವು ಪ್ರಕಟವಾಯಿತು. ಅವನು ನಿಜವಾದ ಜಂಗಮನೇ ಆದನು.

ಅದನ್ನು ಆ ಮೋಟನು ನೋಡಿ ತನ್ನಿಂದ ಆದ ಮಹಾಪರಾಧವನ್ನು ತಿಳಿದವನಾಗಿ ದಸರಯ್ಯನ ಕ್ಷಮೆಯನ್ನು ಬೇಡಿಕೊಂಡನು. ಅದನ್ನು ನೋಡಿ ಪುರದಲ್ಲಿದ್ದ ದುಷ್ಟರು ದಸರಯ್ಯನ ಸಮೀಪಕ್ಕೆ ಬಂದು ಅವನನ್ನು ವಂದಿಸಿ—ದಸರಯ್ಯನೇ, ನಿನ್ನನ್ನು ಹೊಡೆಯಲಿಕ್ಕೆ ಕಳಿಸಿದವರು ನಾವು. ದಯಾಘನನಾದ ಶಿವನೆಂಬ ಸಮುದ್ರಕ್ಕೆ ನೀನು ಚಂದ್ರನಂತಿದ್ದೀ. ನಿನ್ನನ್ನು ಹಿಂಸೆ ಮಾಡಿದರೂ ಈ ಮೋಟನು ಸದ್ಗತಿಯನ್ನು ಹೊಂದಿದನು. ಇದೆಂಥ ಅದ್ಭುತವು! ದುರ್ಜನರ ಹಿತಕರ ಕೃತ್ಯಕ್ಕಿಂತಲೂ ಸಜ್ಜನರ ಹಗೆತನವೇ ಲೇಸು, ಎಂಬ ನಾಣ್ಣುಡಿಯು ಇಂದಿನ ದಿನ ನಮ್ಮ ತಿಳಿವಳಿಕೆಗೆ ಬಂದಿತು, ಎಂದೆನ್ನುತ್ತ ಅವರು ದಸರಯ್ಯನಿಗೆ ಸಾಷ್ಟಾಂಗವೆರಗಿದರು. ದಸರಯ್ಯನು ಅವರಿಗೆ ಅಭಯವನ್ನು ಕೊಟ್ಟು ಅವರನ್ನು ಕಳಿಸಿದನು. ಇದರಿಂದ ದಸರಯ್ಯನ ಕೀರ್ತಿಯು ಜಗತ್ತಿನಲ್ಲಿ ಮತ್ತಷ್ಟು ಹಬ್ಬಿತು. ಹೀಗೆ ಅವನು ಅಹಿಂಸಾಚರಣೆಯನ್ನು ಆಚರಿಸುತ್ತ ದಸರೇಶ್ವರ ಲಿಂಗವೆಂಬ ತನ್ನಿಷ್ಟಲಿಂಗದಲ್ಲಿ ಬಯಲಾದನು.

ದಸರಯ್ಯನ ಹೆಸರು ಗಣಸಹಸ್ರರಲ್ಲಿ ಬಂದಿರುತ್ತದೆ. ಆದ್ದರಿಂದ ಅವನು ವೀರಶೈವರಿಗೆಲ್ಲ ಅತ್ಯಂತ ಪೂಜ್ಯನಾಗಿದ್ದಾನೆ.

ದಸರಯ್ಯನು ವಚನಕಾರನಿದ್ದಾನೆ. ಅವನ ಅಹಿಂಸಾವ್ರತವನ್ನು ವಿವರಿಸುವ ವಚನಗಳನ್ನು ಹಿಂದೆ ಕೊಟ್ಟದ್ದೇವೆ. ಉಳಿದ ಅವನ ಕೆಲವು ವಚನಗಳನ್ನು ಮುಂದೆ ಕೊಟ್ಟದ್ದೇವೆ.

ವಚನಃ— ಸರ್ವಜೀವ ನಿನ್ನ ಹಾಹೆ ಎಂಬೆನೇ? ಅದು ಭಿನ್ನಭಾವ. ತ್ರಿಗುಣಾತ್ಮಕರುಂಟು. ಅವರು ನಿನಗನ್ಯರೆಂಬೆನೇ? ಆ ತ್ರಿಗುಣಾತ್ಮಕರು ನಿನ್ನ ತಿಲಾಂಶ. ಇಂತೀ ಸರ್ವಭೂತಕ್ಕೆ ನಿನ್ನ ದಯೆ. ಎನಗಿದೇಕೆ? ಗೆಲ್ಲ ಸೋಲವೆಂಬ ಖುಲ್ಲತನ ಎಲ್ಲ ಜೀವಕ್ಕು ಸರಿ. ಅದು ಅರುಣೋದಯದಂತೆ. ಎನ್ನ ಚಿತ್ತದಲ್ಲಿ ಸರ್ವಜೀವಕ್ಕೆಲ್ಲಕ್ಕೂ ದಯೆಯ ಮಾಡು ಚನ್ನದಸರೇಶ್ವರಲಿಂಗಾ.

ಭಾವಃ— ಜನರು ಜಗತ್ತಿನಲ್ಲಿ ಹುಟ್ಟಿದ ಪ್ರಾಣಿಗಳೆಲ್ಲವೂ ನಿನ್ನ ಹಾಹೆ ಎಂದರೆ ಪ್ರತಿರೂಪು ಎಂದು ಹೇಳುತ್ತಾರೆ. ಇದು ತಪ್ಪು. ಇದರಿಂದ ದೇವರು



ಬೇರೆ ಜಗತ್ತು ಬೇರೆ ಎಂದು ಹೇಳಿದಂತಾಗುತ್ತದೆ. ಆದರೆ ಅವು ಯಾವತ್ತು ಒಂದೇ ಸ್ವರೂಪು ಎಂದು ತಿಳಿಯಬೇಕು. ಬೇರೆ ಕೆಲವರು ಉತ್ಪತ್ತಿ ಸ್ಥಿತಿ ಲಯಗಳಿಗೆ ಕಾರಣರಾದ ಬ್ರಹ್ಮ ವಿಷ್ಣು ರುದ್ರರೆಂಬುವರಿದ್ದಾರೆ. ಅವರಿಂದ ಜಗತ್ತು ಉಂಟಾಗಿದೆ ಎಂದು ಹೇಳುತ್ತಾರೆ. ಹೀಗೆ ಹೇಳುವದೂ ತಪ್ಪು. ಯಾಕಂದರೆ ಈ ಮೂವರನ್ನು ಪರಮಾತ್ಮನಿಗೆ ಹೋಲಿಸಿ ನೋಡಿದರೆ ಈ ತ್ರಿಮೂರ್ತಿಗಳು ಅತ್ಯಂತ ಸಣ್ಣವರು ಎಂದು ತಿಳಿಯಬೇಕಾಗುತ್ತದೆ. ಆದರೆ ಜಗತ್ತಿನಲ್ಲಿಯ ಎಲ್ಲ ಜೀವಿಗಳಿಗೆ ಆಧಾರವಾಗಿರುವದು ಪರಮಾತ್ಮನ ದಯೆಯು ಒಂದು ಮಾತ್ರ. ಇದೇ ಹೆಚ್ಚಿನದು. ಅದರ ಮೇಲೆಯೇ ಜಗತ್ತು ನಡಿಯುತ್ತದೆ. ಜಗತ್ತಿನಲ್ಲಿ ಕಾಣುವ ಗೆಲವುಗಳು ಸೋಲುಗಳು ಎಲ್ಲ ಜೀವಿಗಳಿಗಿದ್ದು ಈ ಜೀವಿಗಳು ಪರಮಾತ್ಮನ ದಯೆಯ ಮೇಲೆಯೇ ಅವಲಂಬಿಸಿರುತ್ತವೆ. ಅವನ ಈ ದಯೆಯು ಎಲ್ಲರ ಮೇಲೆಯೂ ಇರುತ್ತದೆ. ಸೂರ್ಯನ ಮುಂಜಾವಿನ ಪ್ರಕಾಶವು ಹೇಗೆ ಜಗತ್ತಿನಲ್ಲಿರುವ ಸಣ್ಣದೊಡ್ಡ ವಸ್ತುಗಳ ಮೇಲೆಲ್ಲ ಸರಿಯಾಗಿ ಬೀಳುತ್ತದೆಯೋ ಹಾಗೆಯೇ ಪರಮಾತ್ಮನ ಈ ದಯೆಯು ಎಲ್ಲ ವಸ್ತುಗಳ ಮೇಲೆಯೂ ಪಸರಿಸಿರುತ್ತದೆ. ಈ ವಿಧದ ಭಾವವು ನನ್ನ ಚಿತ್ತದಲ್ಲಿ ಇರಬೇಕು. ಇಷ್ಟೇ ಅಲ್ಲ, ಸರ್ವಜೀವಿಗಳ ಮೇಲೂ ಇರಬೇಕು. ಎಲೋ ಪರಮಾತ್ಮನೇ ಇಂಥ ನಿನ್ನ ದಯೆಯು ನನ್ನಲ್ಲಿ ಇರಲೆಂದು ವಚನಕಾರನು ಪರಮಾತ್ಮನನ್ನು ಬೇಡಿಕೊಳ್ಳುತ್ತಾನೆ.

ವಚನಃ— ನುಡಿಯಲ್ಲಿ ಕಿಂಕರತ್ವವನು ಕರವ ಬೀಸುವಲ್ಲಿ ತುಷಾರ ಕೀಟವನರಿದು ಅಡಿ ಇಡುವಲ್ಲಿ ಪೊಡವಿಯಲ್ಲಿ ಹೊರ ಹೊಮ್ಮಿದ ಜೀವನ ಚೇತನಾದಿಗಳನರಿದು ಮತ್ತೆ ಗಿಡವ ಹಿಡಿವಲ್ಲಿ ಮತ್ತೊಂದು ಒಡಗೂಡುವಲ್ಲಿ ಒಡಗೂಡಿ ಬಿಡುವಲ್ಲಿ ಸರ್ವದಯಕ್ಕೆ ಮದಿ ಮುಚ್ಚವಿಲ್ಲದಿರಬೇಕು. ಇಂತೀ ಸಡಗರದ ಚಿತ್ತ ದಸರೇಶ್ವರ ಲಿಂಗನೊಡಗೂಡುವ ಭಕ್ತಿ.

ಭಾವ;— ಹಿಂಸೆ ಎಂಬುದು ನುಡಿಯಲ್ಲಿಯೂ ಉಂಟು. ಆದರೆ ಅಂಥ ಹಿಂಸೆಯನ್ನು ಸೇವಾಭಾವದಿಂದ ತನ್ನಿಂದ ದೂರ ಮಾಡಬೇಕೆಂದು ವಚನಕಾರನು ಹೇಳುತ್ತಾನೆ. ನೀವು ಅತ್ತಿತ್ತ ಅಡ್ಡಾಡುವಾಗ ಕರಗಳನ್ನು ಬೀಸುತ್ತೀರಿ. ಆಗ ಹವೆಯಲ್ಲಿ ಅತ್ಯಂತ ಸೂಕ್ಷ್ಮವಾದ ಕ್ರಿಮಿಗಳಿದ್ದು ಅವುಗಳ ಹಿಂಸೆಯಾಗಕೂಡದು. ದಾರಿನಡೆಯುವಲ್ಲಿ ಭೂಮಿಯಿಂದ ಹೊರಬೀಳುವಂಥ ಕ್ರಿಮಿಕೀಟಕಗಳನ್ನು ನಾವು ತುಳಿಯಬಹುದು. ಇದನ್ನು ತಿಳಿದುಕೊಂಡು ಅವುಗಳ ಹಿಂಸೆಯಾಗದಂತೆ ನಾವು ನಡೆಯಬೇಕು. ಹಾಗೆಯೇ ಗಿಡಗಳ ಟೊಂಗೆ

ಗಳನ್ನು ಹಿಡಿಯುವಲ್ಲಿಯೂ ಅವುಗಳ ಟೊಂಗೆಗಳನ್ನು ಬಗ್ಗಿಸಿ ಎರಡನೆಯ ಟೊಂಗೆಗಳಿಗೆ ಅವುಗಳನ್ನು ಹಚ್ಚುವಲ್ಲಿಯೂ ಹೀಗೆ ಹಚ್ಚಿ ಅವುಗಳನ್ನು ಪುನಃ ಬಿಡುವಲ್ಲಿಯೂ ಅವುಗಳನ್ನು ಮೆಲ್ಲನೆ ಹಿಡಿದು ಬಿಡಬೇಕು. ಅವುಗಳು ನೊಂದಾವೆಂದು ತಿಳುವಳಿಕೆಯಿಂದ ಇರಬೇಕು. ಈ ತೆರದ ದಯಾಭಾವದಿಂದ ಚಿತ್ತವು ತುಂಬಿಕೊಂಡಿರಬೇಕು. ಈ ತೆರದ ವರ್ತನೆಯಿಂದ ಪರಮಾತ್ಮನೊಡನೆ ಸಾಮರಸ್ಯ ಸ್ಥಿತಿಯು ಪ್ರಾಪ್ತವಾಗುತ್ತದೆಂದು ವಚನಕಾರನು ಹೇಳುತ್ತಾನೆ.

ವಚನಃ– ಎಲ್ಲವನರಿವಲ್ಲಿ ಕಡೆಯಲ್ಲಿ ಕೊಲ್ಲಬೇಕೆಂಬುದೊಂದು ಭೇದ ಉಂಟೇ ? ಶಾಸ್ತ್ರವನೆಲ್ಲ ಕಲಿತಲ್ಲಿಗೆಲ್ಲ ಸೋಲಕ್ಕೆ ಹೋರಬೇಕೆಂಬುದು ಕಡೆಯಲ್ಲಿ ಒಂದು ಸೊಲ್ಲುಂಟೇ ? ಪುರಾಣವನೆಲ್ಲವನೋದಿದಲ್ಲಿ ಸರ್ವ ಜೀವನ ಕೊಲ್ಲು ಕೊರೆ ಎಂಬುದೊಂದು ದಳ್ಳುರಿಯುಂಟೇ ? ಶ್ರುತಿಯ ಕೇಳುವಲ್ಲಿ ಸ್ಮೃತಿಯನಂಗೀಕರಿಸುವಲ್ಲಿ ಸರ್ವ ಹತವ ಮಾಡಬೇಕೆಂಬುದೊಂದು ಗತಿಯುಂಟೇ ? ಇಂತೀ ಆತ್ಮನಲ್ಲಿ ಸರ್ವಭೂತ ಹಿತವುಳ್ಳವಂಗೆ ಆತ ಅತೀತಮಯವಸ್ತು ದಸರೇಶ್ವರ ಲಿಂಗವು.

ಭಾವಃ— ಧರ್ಮಗ್ರಂಥಗಳನ್ನೆಲ್ಲ ಜನರು ಓದುತ್ತಾರೆ. ಯಾವ ಗ್ರಂಥ ಓದಿದರೂ ಅವುಗಳಲ್ಲಿ ಜೀವ ಹಿಂಸೆ ಮಾಡಬೇಕೆಂದು ಎಲ್ಲಾದರೂ ಹೇಳಿದ್ದುಂಟೇ? ಹೇಳಿಲ್ಲವೆಂದು ವಚನಕಾರನ ಅಭಿಪ್ರಾಯವು. ಹಾಗೆಯೇ ಅನೇಕ ತರ್ಕ ಶಾಸ್ತ್ರಗಳನ್ನು ಜನರು ಕಲಿಯುತ್ತಾರೆ. ಹೀಗೆ ಕಲಿತುಕೊಂಡು ಅವರೊಡನೆ ವಾಗ್ವಾದವಾಡಿ ಅವರನ್ನು ಗೆಲ್ಲಬೇಕು, ಹೊರಾಡಬೇಕು ಎಂದು ಎಲ್ಲಾದರೂ ಅವುಗಳಲ್ಲಿ ಒಂದು ನುಡಿಯಾದರೂ ಇದೆಯೇ ಹೇಗೆ ? ಇಲ್ಲವೆಂದು ವಚನಕಾರನು ಹೇಳುತ್ತಾನೆ. ಯಾಕಂದರೆ ಇದು ಸಹ ಹಿಂಸೆಯಾಗುವದೆಂದು ಅವನ ಅಭಿಪ್ರಾಯವು. ಜನರು ಪುರಾಣಗಳನ್ನು ಓದುತ್ತಾರೆ. ಆದರೆ ಅವುಗಳಲ್ಲಿ ಎಲ್ಲಾದರೂ ಜೀವಿಗಳನ್ನು ಕೊಲ್ಲಬೇಕು, ಕೊರೆಯಬೇಕು, ಎಂದು ಬಹು ಕಠೋರವಾದಂಥ ಮತ್ತು ಹೃದಯವನ್ನು ಸುಟ್ಟು ಬಿಡುವಂಥ ವಿಚಾರಗಳಿರುತ್ತವೋ ಹೇಗೆ ? ಇಲ್ಲವೆಂದು ವಚನಕಾರನ ಅಭಿಪ್ರಾಯವು. ಶ್ರುತಿ ಸ್ಮೃತಿಗಳನ್ನು ಕೇಳುವಲ್ಲಿ ಅವುಗಳ ತತ್ವಗಳಂತೆ ನಡಿಯುವಲ್ಲಿ ಜೀವ ಹಿಂಸೆ ಮಾಡಬೇಕೆಂದು ಎಲ್ಲಾದರೂ ಹೇಳಿದುದುಂಟೇ ? ಇಲ್ಲವೆಂಬ ಭಾವವು ಇದರಲ್ಲಿದೆ. ಮನುಷ್ಯನು ಈ ವೃತ್ತಿಯುಳ್ಳವನಾಗಿ ಜೀವಮಯವಾದ ಈ ಜಗತ್ತಿನ ಸಲುವಾಗಿ ದಯಾಭಾವ ವುಳ್ಳವನಾಗಿ ವರ್ತಿಸಬೇಕೆಂದು ವಚನ ಕಾರನು ಹೇಳುತ್ತಾನೆ. ಹೀಗೆ ನಡಿಯುವವನು ಅತೀತನು, ಸ್ವಯವಸ್ತುವು, ಇಷ್ಟೇಅಲ್ಲ ಅವನು ಪ್ರತ್ಯಕ್ಷ ಪರಮಾತ್ಮನು ಎಂದು ವಚನಕಾರನು ಇಲ್ಲಿ ಹೇಳುತ್ತಾನೆ.



## ಮೃದುವಚನಗಳನ್ನಾಡುವದು ಅಹಿಂಸೆಯು.

ಈ ವರೆಗೆ ನಾವು ಅಹಿಂಸೆಯ ಸಂಬಂಧವಾಗಿ ಕೆಲವು ಉಕ್ತಿಗಳನ್ನೂ ಶಿವಶರಣರ ಚರಿತ್ರೆಗಳನ್ನೂ ಉದಹರಿಸಿದೆವು. ಹಾಗೆಯೇ ಯಾರಾದರೂ ಇನ್ನೊಬ್ಬರನ್ನುದ್ದೇಶಿಸಿ ಕ್ರೂರ ಮತ್ತು ನಿಷ್ಠುರ ಶಬ್ದಗಳನ್ನಾಡಿದರೆ ಅದು ಹಿಂಸಾಯುಕ್ತ ಕಾರ್ಯವೆಂದು ಶಿವಶರಣರ ಅಭಿಪ್ರಾಯವದೆ. ಮೃದು ವಚನಗಳೂ ವಿನಯಪೂರಿತ ನುಡಿಗಳೂ ಅಹಿಂಸೆ ಎಂದು ಅವರು ತಿಳಿಯುತ್ತಾರೆ. ಬಸವೇಶ್ವರನು ತನ್ನ ಒಂದು ವಚನದಲ್ಲಿ ಹೇಳಿರುವದೇನಂದರೆ “ ಕಂಡ ಭಕ್ತಂಗೆ ಕೈ ಮುಗಿವಾತನೇ ಭಕ್ತ. ಮೃದುವಚನಂಗಳೇ ಸಕಲ ಜಪಂಗಳಯ್ಯ. ಮೃದುವಚನಂಗಳೇ ಸಕಲ ತಪಂಗಳಯ್ಯ. ಸದುವಿನಯವೇ ಸದಾಶಿವನ ಒಲುಮೆಯಯ್ಯ. ಕೂಡಲಸಂಗಮದೇವಯ್ಯ ನಂತಲ್ಲ ದೊಲ್ಲನಯ್ಯ ” ದುಷ್ಟ ಶಬ್ದಗಳನ್ನಾಡುವದು ಹಿಂಸೆ ಎಂತಲೂ ಮೃದು ವಚನಗಳು ಅಹಿಂಸೆ ಎಂತಲೂ ಅವರು ತಿಳಿದಿರುತ್ತಾರೆ. ಪ್ರಾಣಿಗಳನ್ನು ಪ್ರತ್ಯಕ್ಷ ಕೊಲ್ಲುವದು ಹೇಗೆ ಹಿಂಸೆಯೋ ಹಾಗೆಯೇ ದುಷ್ಟ ಶಬ್ದಗಳನ್ನಾಡುವದೂ ಕೂಡ ಹಿಂಸೆ ಎಂದೆನಿಸುತ್ತಿದೆ. ಶಿವ ಶರಣರು ಹಿಂಸೆಯ ಅರ್ಥವನ್ನು ಹೀಗೆ ವಿಸ್ತೃತವಾಗಿ ಮಾಡಿದ್ದಾರೆ.

ಬಸವೇಶ್ವರನು ಇನ್ನೊಂದು ವಚನದಲ್ಲಿ ಇದೇ ಭಾವವನ್ನಿಟ್ಟುಕೊಂಡು ನುಡಿದಿದ್ದಾನೆ. ಅದು ಯಾವದೆಂದರೆ– “ಎನಗೆ ನಾನೇ ಹಗೆ ನೋಡಯ್ಯ. ಎನಗೆ ನಾನೇ ಕೆಳೆನೋಡಯ್ಯ. ಎನ್ನ ಸದ್ಭಕ್ತರೊಡನೆ ವಿರೋಧವ ಮಾಡಿದರೆ ಎನ್ನಕೊಲುವುದಾಗಿ, ನಿಮ್ಮ ಪುರಾತನರಿಗಂಜಿ ಬೆಸಗೊಂಡಡೆ ಎನ್ನ ಕಾಯ್ವುದಾಗಿ, ಅನ್ಯರು ಹಗೆಯಲ್ಲ, ಕೆಳೆಯಲ್ಲ. ಬಾಗಿದ ತಲೆಯ ಮುಗಿದ ಕೈಯ್ಯೊಗಿರಿಸು ಕೂಡಲ ಸಂಗಮದೇವಾ.

ಇನ್ನೊಬ್ಬ ವಚನಕಾರನು ಮನುಷ್ಯನ ವೃತ್ತಿಯು ಹೇಗಿರಬೇಕೆಂಬುದನ್ನು ಕುರಿತು ಕೆಳಗಿನ ಸುಂದರವಾದ ವಚನವನ್ನು ನುಡಿದಿದ್ದಾನೆ. ಅದು ಯಾವದೆಂದರೆ,

“ ಎತ್ತಪ್ಪೆ ಶರಣಂಗೆ ತೊತ್ತಪ್ಪೆ ಶರಣಂಗೆ. ಭೃತ್ಯನಾಗಿ ಸದ್ಭಕ್ತರ ಮನೆಯ ಬಾಗಿಲ ಕಾಯ್ದಿಪ್ಪ ಸೊಣಗನಪ್ಪೆ. ಕರ್ತರ ಮನೆಗೆ ಕರವೆತ್ತಿ ಸೊಡೆ ನಡುವ ಭಕ್ತರ ಮನೆಯ ಹಿತ್ತಿಲ ಬೇಲಿಯಾಗಿಪ್ಪೆನೈ ರಾಮನಾಥಾ”

ಮನುಷ್ಯನು ಅಹಿಂಸೆಯಿಂದ ಆಚರಿಸುವದು ಮಾತ್ರವಲ್ಲ, ಜನರ ಕೂಡ ಸೇವಾಭಾವದಿಂದ ವರ್ತಿಸಬೇಕೆಂದು ವಚನಕಾರರು ಹೇಳುತ್ತಾರೆ. ಹೇಗೆ ತೊತ್ತು, ಎತ್ತು, ಸೇವಕ, ನಾಯಿ, ಹಿತ್ತಲ ಬೇಲಿ, ಜನಸುಗಳನ್ನು ಕಾಯುವ ಕೆಲಸ ಮಾಡುತ್ತವೆಯೋ ಹಾಗೆಯೇ ಮನುಷ್ಯನು ಹೆರವರಿಗೆ ಸಹಾಯಕನಾಗಿ ವರ್ತಿಸ ಬೇಕೆಂದು ಹೇಳುತ್ತಾರೆ. ಒಬ್ಬರು ಮತ್ತೊಬ್ಬರ ಮೇಲೆ ಸಿಟ್ಟನ್ನು ಹಿಡಿದು ಕೆಲ ವೊಂದು ಕಾರಣವನ್ನು ಮುಂದು ಮಾಡಿ ದುಷ್ಟಶಬ್ದಗಳನ್ನು ನುಡಿಯುತ್ತ ಪರಸ್ಪರ ಹೋರಾಡುತ್ತಾರೆ. ಶರಣರ ಅಭಿಪ್ರಾಯದ ಪ್ರಕಾರ ಇದು ಹಿಂಸೆ ಎಂದೆನಿಸಿ ಕೊಳ್ಳುತ್ತದೆ. ಇಂಥ ಪ್ರಸಂಗದಲ್ಲಿ ಹೇಗೆ ನಡೆಯಬೇಕೆಂಬುದನ್ನು ಕುರಿತು ಬಸವೇಶ್ವರನು ತನ್ನ ವಚನದಲ್ಲಿ ಕೆಳಗಿನಂತೆ ನುಡಿದಿದ್ದಾನೆ. ಅದು ಹೇಗೆಂದರೆ:-

"ಒಂದಕ್ಕೊಂದು ನುಡಿದು ಕಣ್ಣ ಕೆಂಜನೆಮಾಡಿ ಗಂಡುಗೆದರಿ ಮುಡಿ ಹಿಕ್ಕುವ ಕೆಲರ ಕಂಡಂಜುವೆನೋಸರಿಸುವೆ, ಓಡಿದೆನೆಂದು ಭಂಗವಾದಡಾಗಲಿ ನಮ್ಮ ಕೂಡಲ ಸಂಗನ ಶರಣರನುಭಾವವಿಲ್ಲದವರ ಹೊಲಮೇರೆಯು ಹೊದ್ದೆ. ಬಿಟ್ಟೋಡುವೆ.

ಬಸವೇಶ್ವರನು ಅನ್ನುವದೇನಂದರೆ, ಒಂದಕ್ಕೊಂದು ನುಡಿದು ಹೋರಾ ಡುವಂಥವರ ಸಮೀಪದಲ್ಲಿ ನಾನು ಇರಲಾರೆನು. ನಾನು ಅವರ ಹೊಲದ ಮೇರೆ ಯನ್ನು ಸಹ ಬಿಟ್ಟು ಅಲ್ಲಿಂದ ಓಡಿಹೋಗುವೆನು. ಜನರು ನಾನು ಕೈಲಾಗದವನು, ಪುಕ್ಕನು ಎಂದು ಅಂದರೂ ಚಿಂತೆಯಿಲ್ಲ. ಆದರೆ ಹೀಗೆ ಆಚರಿಸುವದು ಅನು ಭಾವಿಯಾಗಿ ಯಾರು ಇದ್ದಾರೋ ಅವರಿಗೆ ಮಾತ್ರ ಶಕ್ಯವೆಂದು ಬಸವೇಶ್ವರನು ಹೇಳುತ್ತಾನೆ. ಹೀಗೆ ನಡೆಯುವದು ಬಹಳ ಕಠಿಣವೆಂದು ಅವನ ಅಭಿಪ್ರಾಯವಿದೆ.

## ಚನ್ನಬಸವೇಶ್ವರ

ಈ ವಿಷಯವಾಗಿ ಚನ್ನಬಸವೇಶ್ವರನ ಒಂದು ವಚನವೂ ಇದೆ. ಅದು ಏನಂದರೆ- "ಭಕ್ತನು ಶಾಂತನಾಗಿರಬೇಕು. ತನ್ನ ಕುರಿತು ಬಂದ ಠಾವಿನಲ್ಲಿ ಸತ್ಯನಾಗಿರಬೇಕು. ಭೂತಹಿತವಹ ವಚನವ ನುಡಿಯಬೇಕು. ಸಕಲ ಪ್ರಾಣಿಗಳ ತನ್ನಂತೆ ಭಾವಿಸುವದು. ಅಪಾತ್ರದಾನವ ಮಾಡಲಾಗದು. ಸಕಲೇಂದ್ರಿಯಗಳ ತನ್ನ ವಶವ ಮಾಡುವದು. ಇದೇ ಮೊದಲಲ್ಲಿ ಬೇಹ ಶೌಚ ನೋಡಾ. ಲಿಂಗವ ಪೂಜಿಸಿ ಪ್ರಸಾದವ ಪಡೆವಡೆ ಇದೇ ಸಾಧನ ಕೂಡಲ ಚನ್ನಸಂಗಮದೇವಾ.

ಇದರಲ್ಲಿ ಚನ್ನಬಸವೇಶ್ವರನು ಅಹಿಂಸೆಯನ್ನು ಹೇಗೆ ನಡೆಯಲ್ಲಿ ತರ ಬೇಕೆಂಬುದನು ಬಹು ಸಾರಸವಾಗಿ ಹೇಳಿದ್ದಾನೆ.



## ಸಿದ್ಧರಾಮೇಶ್ವರ

ಸೊಲ್ಲಾಪುರದ ಸಿದ್ಧರಾಮೇಶ್ವರನು ಅಹಿಂಸೆಯ ವಿಷಯವಾಗಿ ಕೆಲವು ಸುಂದರ ವಚನಗಳನ್ನು ನುಡಿದಿದ್ದಾನೆ. ಅವುಗಳನ್ನು ನಾವು ಕೆಳಗೆ ಕೊಟ್ಟಿದ್ದೇವೆ. ಅವು ಬಹು ಅಲೌಕಿಕವಾದ ಉಕ್ತಿಗಳಿವೆ.

ವಚನ:— ಆವನಾಗಿ ಒಬ್ಬನು ನಿಡುಮುಳ್ಳಿನ ಮೇಲೆ ಪೊರಳ್ಚುಗೆಯ. ಮೇಣು ಪಾಂಸೆಯ ಹಾಸಿನ ಮೇಲೆ ಪೊರಳ್ಚುಗೆಯ. ಪೊರಳ್ಚಿದಡೆ ಮನ ವಿಸ್ಕಂದ ವಾಗದೊಂದೀಯಂದದಲ್ಲಿಪ್ಪಂತಪ್ಪ ನಿಮ್ಮದೊಂದು ಸಮತಾಗುಣ ಎನ್ನನೆಂದು ಪೊರ್ದಿಪ್ಪುದು ಹೇಳಾ ಕಪಿಲಸಿದ್ಧಮಲ್ಲಿಕಾರ್ಜುನಾ.

ಭಾವ:- ಯಾವನಾದರೊಬ್ಬನು ಚೂಪಾದ ಮುಳ್ಳಿನ ಮೇಲೆ ನನ್ನನ್ನು ಹೊರಳಿಸಲಿ. ಹೊರಳಿಸಲಿ ಮತ್ತು ಹಾವಸೆಯ ಹಾಸಿಗೆಯ ಮೇಲೆಯೂ ಹೊರಳಿಸಲಿ. ಹೀಗೆ ಹೊರಳಿಸಿದರೆ ನನ್ನ ಮನಸ್ಸು ಕ್ಷೋಭಗೊಳ್ಳದೆ ಇರುವಂಥ ನಿಮ್ಮ ಸಮಾಧಾನ ಗುಣವು ಎಲೋ ಕಪಿಲಸಿದ್ಧಮಲ್ಲಿಕಾರ್ಜುನನೆ ಹೇಗೆ ನನ್ನನ್ನು ಹೊಂದುವದು ಹೇಳು ?

ವಚನ:- ಆವನಾಗಿ ಒಬ್ಬನು ಅವಿಚಾರದಿಂದ ಶಿರಸ್ಸಿನ ಮೇಲೆ ಕೈದುವ ನಿಕ್ಕುಗೆಯ. ಮೇಣು ಗಂಧಾಕ್ಷತೆ ಪುಷ್ಪದಲ್ಲಿ ಪೂಜೆ ಮಾಡುಗೆಯ. ಪೂಜೆ ಮಾಡಿದೊಡೆ ಮನವಿಸ್ಕಂದವಾಗದೊಂದೀಯಂದದಲ್ಲಿಪ್ಪಂತಪ್ಪ ನಿಮ್ಮ ದೊಂದು ಸಮತಾಗುಣ ಎನ್ನನೆಂದು ಬಂದು ಪೊರ್ದಿಪ್ಪುದು ಹೇಳಾ ಕಪಿಲ ಸಿದ್ಧ ಮಲ್ಲಿಕಾರ್ಜುನಾ.

ಭಾವ:— ಯಾವನಾದರೊಬ್ಬನು ಅವಿಚಾರದಿಂದ ನನ್ನ ಶಿರಸ್ಸಿನ ಮೇಲೆ ಶಸ್ತ್ರವನ್ನು ಹಾಕಲಿ ಅಥವಾ ಗಂಧಾಕ್ಷತೆ ಪುಷ್ಪದಲ್ಲಿ ಪೂಜೆಮಾಡಲಿ. ಏನು ಮಾಡಿದರೂ ನನ್ನ ಮನಸ್ಸು ಚಂಚಲಗೊಳ್ಳದೆ ಇರುವಂಥ ನಿಮ್ಮದೊಂದು ಸಮಾಧಾನ ಗುಣವು ಎಲೋ ಕಪಿಲಸಿದ್ಧಮಲ್ಲಿಕಾರ್ಜುನನೇ ಹೇಗೆ ನನ್ನನ್ನು ಹೊಂದುವದು ಹೇಳು.

ವಚನ:- ಆವನಾದರೊಬ್ಬನು ನಾಸ್ತಿಕವನಾಡಿ ನಗುತಿಪ್ಪುದನು ತಾ ಕೇಳಿ ನುತ್ತಾನನಾಗಿ ಬಂದು ಪೇಳ್ದೊಡೆ ಮನ ವಿಸ್ಕಂದವಾಗದೊಂದೀಯಂದ ದಲ್ಲಿಪ್ಪಂತಪ್ಪ ನಿಮ್ಮದೊಂದು ಸಮತಾ ಗುಣ ಎನ್ನನೆಂದು ಬಂದು ಪೊರ್ದಿ ಪ್ಪುದು ಹೇಳಾ ಕಪಿಲ ಸಿದ್ಧಮಲ್ಲಿಕಾರ್ಜುನಾ

ಭಾವ:— ಯಾವನಾವರೊಬ್ಬರನು ನಾನು ನಾಸ್ತಿಕನು ಎಂದು ಹೇಳಿ ನಗುತ್ತಿರುವದನ್ನು ಒಬ್ಬಾನೊಬ್ಬನು ನೋಡಿ ಅದನ್ನು ಬೇರೊಬ್ಬನು ನನ್ನ

ಕಡೆಗೆ ಬಂದು ಹೇಳಿದಲ್ಲಿ ನನ್ನ ಮನಸ್ಸು ಕ್ಲೇಷಗೊಳ್ಳದೆ ಇರುವಂಥ ತಮ್ಮದೊಂದು ಸಮಾಧಾನ ಗುಣವು ಎಲ್ಲೋ ಕಪಿಲ ಸಿದ್ಧ ಮಲ್ಲಿಕಾರ್ಜುನನೇ ಹೇಗೆ ನನ್ನನ್ನು ಹೊಂದುವದು ಹೇಳು.

ವಚನ:— ಆವನಾಗಿ ಒಬ್ಬನು ಕರವ ಪಿಡಿದು ಒಡಗೊಂಡೊಯ್ದು ಒಳ್ಳಿತ್ತನಾದಡೂ ನೀಡುಗೆಯು. ಮೇಣು ಮಣ್ಣನಾದಡೂ ನೀಡುಗೆಯು. ನೀಡಿದೊಡೆ ಮನ ವಿಸ್ಕಂದವಾಗದೊಂದೀಯಂದದಲ್ಲಿಪ್ಪಂತಪ್ಪ ನಿಮ್ಮದೊಂದು ಸಮತಾ ಗುಣ ಎನ್ನನೆಂದು ಬಂದು ಪೊಂದಿರ್ಪುದು ಹೇಳಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

ಭಾವ:— ಯಾವನಾದರೊಬ್ಬನು ನನ್ನ ಕೈಯ್ಯನ್ನು ಹಿಡಿದು ಕರೆದುಕೊಂಡು ಹೋಗಿ ಒಳ್ಳೇ ಪದಾರ್ಥವನ್ನು ಕೊಡಲಿ, ಅಥವಾ ಮಣ್ಣನ್ನಾದರೂ ಕೊಡಲಿ. ಕೊಟ್ಟರೆ ನನ್ನ ಮನಸ್ಸು ಕ್ಲೇಷಗೊಳ್ಳದೆ ಇರುವಂಥ ನಿಮ್ಮದೊಂದು ಸಮತಾ ಗುಣವು ಎಲ್ಲೋ ಕಪಿಲಸಿದ್ಧ ಮಲ್ಲಿಕಾರ್ಜುನನೇ ಹೇಗೆ ನನ್ನಲ್ಲಿ ಬಂದೀತು ಹೇಳು.

ವಚನ:— ಸಿರಿಯಾಯಿತ್ತೆಂದು ಉಚ್ಚಹದಿಂದುಬ್ಬದೆ, ಕೆಟ್ಟತ್ತೆಂದು ಮನನೊಂದು ಭಿನ್ನನಾದಂತಿರಬೇಡಾ. ಹಿರಿಯರ ಮನ ಮನವಿಸ್ತಂದವಾಗದೊಂದೀಯಂದದಲ್ಲಿಪ್ಪಂತಪ್ಪ ನಿಮ್ಮದೊಂದು ಸಮತಾಗುಣ ಎನ್ನನೆಂದು ಬಂದು ಪೊಂದಿರ್ಪುದು ಹೇಳಾ ಕಪಿಲಸಿದ್ಧ ಮಲ್ಲಿಕಾರ್ಜುನಾ.

ಭಾವ:— ನನಗೆ ಸಿರವಂತಿಕೆಯು ಬಂದಿತೆಂದು ಉತ್ಸಾಹದಿಂದ ಉಬ್ಬದೆ, ಸಿರಿಯು ಕೆಟ್ಟತ್ತೆಂದು ಮನಸ್ಸು ನೊಂದು ವಿಹ್ವಲನಾದಂತಿರಬೇಡ. ಹಿರಿಯರಾದವರು ಹೀಗಿರಬಾರದು. ಆಗ ನನ್ನ ಮನಸ್ಸು ಕ್ಲೇಷಗೊಳ್ಳದೆ ಇರುವಂಥ ನಿಮ್ಮದೊಂದು ಸಮಾಧಾನ ಗುಣವು ಎಲ್ಲೋ ಕಪಿಲಸಿದ್ಧಮಲ್ಲಿಕಾರ್ಜುನನೇ ಹೇಗೆ ನನ್ನನ್ನು ಹೊಂದುವದು ಹೇಳು.

ಮೇಲಿನ ವಿವರಣೆಗಳ ಮೇಲಿಂದ ಶಿವಶರಣರು ಅಹಿಂಸೆಯ ತತ್ವವನ್ನು ಜೈನ ಬ್ರಾಹ್ಮಣ ಮೊದಲಾದವರಿಂದ ಕಲಿತುಕೊಳ್ಳದೆ ತಮ್ಮ ಶಿವಾನುಭವದ ತತ್ವಗಳನ್ನು ಪರಿಪಾಲಿಸುವಲ್ಲಿ ತಮಗೆ ಉಂಟಾದ ಅನುಭವವನ್ನು ಅವಲಂಬಿಸಿ ನುಡಿದರೆಂಬುದು ತಿಳಿದುಬರುತ್ತದೆ. ಜೀವ ಹಿಂಸೆ ಮಾಡಿದಲ್ಲಿ



ಸರ್ವವ್ಯಾಪಿಯಾದ ಪರಮಾತ್ಮನನ್ನು ನೋಯಿಸಿದಂತೆ ಆಗುತ್ತದೆಂದು ಅವರ ದೃಢವಾದ ಅಭಿಪ್ರಾಯವದೆ. ಅವರು ಕೇವಲ ಮನುಷ್ಯನನ್ನು ಉದ್ದೇಶಿಸಿ ಅಹಿಂಸೆಯಿಂದ ನಡೆಯುವದಲ್ಲದೆ ಜಗತ್ತಿನಲ್ಲಿರುವ ಎಲ್ಲ ಜೀವಜಂತುಗಳೂ ಸಸ್ಯಗಳೂ ಹೀಗೆ ಎಲ್ಲ ವರ್ಗದವರೊಡನೆ ಅಹಿಂಸೆಯಿಂದ ವರ್ತಿಸಬೇಕೆಂದು ಬೋಧಿಸಿದ್ದಾರೆ.

ಮಹಾತ್ಮಾ ಗಾಂಧೀಯವರು ಕೇವಲ ರಾಜಕೀಯ ದೃಷ್ಟಿಯಿಂದ ಈ ವಿಷಯವನ್ನು ವಿವೇಚಿಸಿದ್ದಾರೆ. ಆದರೆ ಶಿವಶರಣರು ಇಡೀ ವಿಶ್ವಕ್ಕೆ ಈ ತತ್ವವು ಅನ್ವಯಿಸುವದೆಂದು ಹೇಳಿ ಆ ದೃಷ್ಟಿಯಿಂದ ಅಹಿಂಸಾ ವ್ರತವನ್ನು ಪಾಲಿಸಬೇಕೆಂದು ಬೋಧಿಸಿದ್ದಾರೆ. ಇದು ಅವರ ವೈಶಿಷ್ಟ್ಯವು.

ಅಹಿಂಸೆ, ಸಹಕಾರ, ಪರಸ್ಪರ ಪ್ರೇಮ, ದಯಾಭಾವ, ಸಹಜೀವನ ಇವು ಸಮಾನಾರ್ಥವುಳ್ಳವಾಗಿವೆ. ಇವುಗಳು ಮನುಷ್ಯರಲ್ಲಿ ಪ್ರತ್ಯಕ್ಷ ಪ್ರೇಮ ಸಂಬಂಧವನ್ನು ಹುಟ್ಟಿಸುತ್ತವೆ. ಇದರಿಂದ ಜಗತ್ತು ಜನರ ವಾಸಕ್ಕೆ ಯೋಗ್ಯವಾಗುತ್ತದೆ. ಮತ್ತು ರಾಷ್ಟ್ರಗಳು ಬೆಳೆಯುತ್ತವೆ. ವಿಶೇಷವಾಗಿ ಸಹಜೀವನ ತತ್ವವು ಜನತೆಗೆ ಹೆಚ್ಚಿಗೆ ಪರಿಣಾಮಕಾರಿಯಾದುದು. ಈ ತತ್ವವು ಪಶುಪಕ್ಷ್ಯಾದಿಗಳಿಗೂ ಅನ್ವಯಿಸುತ್ತದೆ. ನಾಯಿ, ಬೆಕ್ಕು, ಕುದುರೆ, ಎತ್ತು, ಆಕಳು, ನಾನಾತರಹದ ಪಕ್ಷಿಗಳು ಜಗತ್ತಿನಲ್ಲಿ ಇದ್ದು ಅವುಗಳನ್ನು ಸಂಹಾರ ಮಾಡದೆ ಅವುಗಳೊಡನೆ ಪ್ರೀತಿಯಿಂದಿರಬೇಕು. ಇಷ್ಟೇ ಅಲ್ಲ. ಶಿವಶರಣರು ಇದಕ್ಕೂ ಮುಂದೆ ಹೋಗಿ ಗಿಡಗಂಟೆಗಳು, ವನಸ್ಪತಿಗಳು, ವೃಕ್ಷಾದಿಗಳು ಇವುಗಳು ಸಹ ಉಪಯುಕ್ತ ವಸ್ತುಗಳಿದ್ದು ಅವುಗಳನ್ನು ಪ್ರೀತಿಯಿಂದ ಜೋಕೆ ಮಾಡಬೇಕೆಂದು ಅವರು ಹೇಳುತ್ತಾರೆ. ಅವುಗಳನ್ನು ನಾವು ಸರಿಯಾಗಿ ಸಾಕಿ ಸಲಹಬೇಕು. ಇದರಿಂದ ವೃಕ್ಷಗಳು ನಾಡಿನಲ್ಲಿ ದಟ್ಟವಾಗಿ ಬೆಳೆಯಹತ್ತುವವು. ಅರಣ್ಯಗಳು ಉತ್ಪನ್ನವಾಗುವವು. ಇದರಿಂದ ಪರ್ಜನ್ಯವು ನಾಡಿನಲ್ಲಿ ಹೆಚ್ಚುವದು. ಇಲ್ಲದಿದ್ದರೆ ನಮ್ಮ ನಾಡು ಸಹಾರಾ, ಅರಬಸ್ತಾನ, ರಜಪುತಸ್ತಾನ, ಈ ದೇಶಗಳಲ್ಲಿ ಹೇಗೆ ಉಸಿಕಿನ ಬೈಲುಗಳು ಆಗಿವೆಯೋ ಹಾಗೆಯೇ ಇಲ್ಲಿಯ ಸ್ಥಿತಿಯಾಗುವದು. ಈ ಸ್ಥಿತಿಯು ದೇಶಕ್ಕೆ ಅಹಿತಕಾರಕವು. ಆದ್ದರಿಂದ ನಾವು ದಸರಯ್ಯನಂತೆ ವನಸ್ಪತ್ಯಾದಿಗಳನ್ನು ಪ್ರೀತಿಸಿ ಸಲಹಬೇಕು. ಈ ತತ್ವವನ್ನು ವಿಜಾಪುರ ಜಿಲ್ಹೆ, ಕಲಬುರ್ಗಿ, ರಾಯಚೂರ ಜಿಲ್ಲೆಗಳು ಬಳ್ಳಾರಿ, ಚಿತ್ರಕಲ್‌ದುರ್ಗ ಇಲ್ಲಿಯ ಜನರು ಪಾಲಿಸಿದಲ್ಲಿ ಈ ಪ್ರದೇಶಗಳು

ಸ್ವಲ್ಪ ದಿವಸಗಳಲ್ಲಿ ಫಲದ್ರೂಪ ಸೀಮೆಗಳಾಗುವವು. ಕಾರವಾರ, ಮಂಗಳೂರ ಈ ಜಿಲ್ಲೆಗಳಲ್ಲಿ ಗುಡ್ಡದ ಮೇಲಿಂದ ರಭಸದಿಂದ ಹರಿದು ಸಮುದ್ರ ಸೇರುವ ನೀರನ್ನು ತಡೆದು ವನಸ್ಪತಿಗಳನ್ನು ಅಲ್ಲಿ ಬೆಳಿಸುತ್ತ ಹೋಗಬೇಕು. ಇವು ಅಲ್ಲಿ ಹೆಚ್ಚಾಗಿ ಬೆಳೆಯುವದಿಲ್ಲ. ಸಣ್ಣ ದೊಡ್ಡ ಪ್ರಪಾತಗಳನ್ನು ಅಲ್ಲಿ ಕಲ್ಪಿಸಬೇಕು. ಇದರಿಂದ ಅಲ್ಲಿಯ ಸಂಪತ್ತು ಬೆಳಿಯುವದು. ಆದ್ದರಿಂದ ನಾವು ಅಹಿಂಸೆಗೆ ಅಕುಂಚಿತ ಅರ್ಥ ಮಾಡದೆ ಶಿವಶರಣರಂತೆ, ಅದಕ್ಕೆ ವಿಸ್ತೃತ ಅರ್ಥ ಮಾಡಿ, ಭೂಮಿ, ವನಸ್ಪತಿ, ದನಕರುಗಳನ್ನು ಕಾಪಾಡುತ್ತ ಹೋದರೆ ನಾಡಿಗೆ ಸೌಖ್ಯವಾಗದೆ ಇರದು.